بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْکَرِیْمِ    وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 10

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07 ಮಾರ್ಚ್ 2024, 07 ಅಮಾನ್ 1403 ಹಿಜರಿ ಶಮ್ಸಿ,
25 ಶಾಬಾನ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمْرِهٖ وَاَمْرِهٖ۔

## ಅಲ್ಲಾಹನ ಉಪದೇಶ

يَآ اَيُّهَا الَّذِيْنَ اٰمَنُوا اسْتَجِيْبُوْا لِلّٰهِ
وَلِلرَّسُوْلِ اِذَا دَعَاكُمْ لِمَا
يُحْيِيْكُمْ (سورۃ الانفال:25)

(ಅಲ್ ಅನ್‌ಫಾಲ್: 25)

ಅಂದರೆ: ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ ಅದರಿಂದ ಅನುಕೂಲವಾದುದನ್ನು ನೀವು ಪಠಿಸಿರಿ

**(2419)** ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ನಾನು ಹಝ್ರತ್ ಹಿಶಾಮ್ ಬಿನ್ ಹಕೀಮ್ ಬಿನ್ ಹಿಝಾಮ್(ರ) ಅವರಿಗೆ ನಾನು ಪಠಿಸುವ ವಿಧಾನಕ್ಕಿಂತ ವಿಭಿನ್ನ ರೀತಿಯಲ್ಲಿ ಸೂರಾ ಫುರ್ಖಾನ್ ಅನ್ನು ಪಠಿಸುವುದನ್ನು ಆಲಿಸಿದೆ. ಮತ್ತು ಅದನ್ನು (ಸೂರಾ) ಹಝ್ರತ್ ಪೈಗಂಬರ್(ಸ) ರವರು ನನಗೆ ಪಠಿಸಿದ್ದರು. ಮತ್ತು ನಾನು ಅವರ ಮೇಲೆ ದಾಳಿ ಮಾಡಬಹುದಿತ್ತು, ಆದರೆ ನಾನು ಅವರಿಗೆ ನಮಾಝನ್ನು ಸಂಪೂರ್ಣವಾಗಿ ನಿರ್ವಹಿಸುವ ತನಕ ಬಿಡುವು ನೀಡಿದೆ. ತದನಂತರ, ನಾನು ಅವರು ಧರಿಸಿದ್ದ ಮೇಲಂಗಿಯನ್ನು ಹಿಡಿದು ಎಳೆದು ಹಝ್ರತ್ ಪೈಗಂಬರ್(ಸ) ಅವರ ಕರೆತಂದು ಹೇಳಿದೆ: ನಾನು (ಸೂರತ್ ಅಲ್-ಫುರ್ಕಾನ್) ಅನ್ನು ನೀವು(ಸ) ನನಗೆ ಕಲಿಸಿದ ವಿಧಾನಕ್ಕೆ ವಿರುದ್ಧವಾಗಿ ಅದನ್ನು ಬೇರೆ ರೀತಿಯಲ್ಲಿ ಪಠಿಸುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ನನಗೆ ಉದ್ದೇಶಿಸಿ ಹೇಳಿದರು: ಅವರನ್ನು ಬಿಟ್ಟುಬಿಡಿ. ನಂತರ ಅವರು(ಸ) ಅವರಿಗೆ ಹೇಳಿದರು: ಓದಿ. ಅದಕ್ಕೆ ಅವನು ಓದಿದನು. ಅವರು(ಸ) ಹೇಳಿದರು: ಅದೇ ರೀತಿ ಅವತೀರ್ಣಗೊಂಡಿದೆ. (ಆಗ ಅವರು ಹೇಳಿದರು:) ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ. ನಿಮಗೆ ಯಾವುದು ಸುಲಭವೋ ಹಾಗೆಯೇ ಪಠಿಸಿರಿ. **(ಸ'ಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

**Love for All, Hatred for None**

ಉಪದೇಶದ ಸ್ಥಾನವು ಅತ್ಯುನ್ನತ ಮಟ್ಟದ ಸ್ಥಾನವಾಗಿದೆ ಮತ್ತು ಅದು ಪ್ರವಾದಿತ್ವದ ಘನತೆಯನ್ನು ಒಳಗೊಂಡಿರುತ್ತದೆ, ಅದಕ್ಕೆ ಷರತ್ತೇನೆಂದರೆ ದೈವಿಕ ಇಚ್ಛೆಯನ್ನು ಹೊಂದಿ ಕಾರ್ಯ ನಿರ್ವಹಿಸಬೇಕು.
ಬೋಧಕನು ತನ್ನೊಳಗೆ ವಿಶೇಷ ರೀತಿಯ ಸುಧಾರಣೆಯನ್ನು ಪಡೆಯುತ್ತಾನೆ ಏಕೆಂದರೆ ಅವನು ಹೇಳುವುದನ್ನು ತನ್ನ ಕ್ರಿಯೆಗಳ ಮೂಲಕ ಜನರ ಮುಂದೆ ತೋರಿಸುವುದು ಅವಶ್ಯಕವಾಗಿದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಸಮರ್ಥ ಅಶುದ್ಧ ಜನರು ಸತ್ಯ ಮತ್ತು ಯಥಾರ್ಥವಾದ ಮಾತುಗಳನ್ನು ಕೇಳಲು ಸಾಧ್ಯವಿಲ್ಲ, ಮತ್ತು ಅವರಿಗೆ ಯಾವುದೇ ಜ್ಞಾನ ಮತ್ತು ಬುದ್ಧಿವಂತಿಕೆಯ ಮಾತುಗಳನ್ನು ಪ್ರಸ್ತುತಪಡಿಸಿದಾಗ, ಅವರು ಅದನ್ನು ಗಮನಿಸುವುದಿಲ್ಲ ಬದಲಿಗೆ ಅದನ್ನು ನಿರ್ಲಕ್ಷಿಸುತ್ತಾರೆ.

ನಿಸ್ಸಂದೇಹವಾಗಿಯೂ ಸತ್ಯ ಹೇಳುವವರೂ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಕೇವಲ ಅಲ್ಲಾಹನ ಸಂತೃಪ್ತಿಗಾಗಿ ಮಾತ್ರ ಒಬ್ಬರನ್ನು ಸತ್ಯ ಮಾತುಗಳನ್ನು ಹೇಳುವವರು ಬಹಳ ಕಡಿಮೆ ಜನರಿದ್ದಾರೆ. ಇಲ್ಲದಂತೆ ಇದ್ದಾರೆ. ಸಾಮಾನ್ಯವಾಗಿ ಉಪದೇಶ ನೀಡುವವರು ಉಪದೇಶವನ್ನು ನೀಡುತ್ತಾರೆ ಆದರೆ ಅದರ ಮೂಲ ಉದ್ದೇಶವು ಜನರಿಂದ ಏನನ್ನಾದರೂ ಸ್ವೀಕರಿಸುವುದು ಅಥವಾ ಆದಾಯ ಗಳಿಸುವುದಾಗಿರುತ್ತದೆ. ಈ ಉದ್ದೇಶವು ಅವರ ಮಾತುಗಳೊಂದಿಗೆ ಮಿಶ್ರಣಗೊಂಡಾಗ, ಸತ್ಯಾಂಶ ಹಾಗೂ ದೈವತ್ವವು ಅದರ ಅಂಧಕಾರದಲ್ಲಿ ಮರೆಮಾಡುತ್ತದೆ ಮತ್ತು ದೈವ ಮಾತುಗಳನ್ನು ಆಲಿಸುವ ಮೂಲಕ ಹೃದಯ ಹಾಗೂ ಮನಸ್ಸಿಗೆ ತಲುಪುವ ಸುಗಂಧಗೊಳಿಸುವ ಆನಂದ ಮತ್ತು ದೈವಜ್ಞಾನದ ಪರಿಮಳವನ್ನು ಮರೆಮಾಡುತ್ತದೆ. ಅದು ಸ್ವಾರ್ಥ ಮತ್ತು ಲೌಕಿಕತೆಯ ಕೊಳೆಯಲ್ಲಿ ಹೂತುಹೋಗುತ್ತದೆ, ಮತ್ತು ಅನೇಕ ಜನರು ಮಿಯಾಂ!! ಈ ಎಲ್ಲಾ ವಿಷಯಗಳು ಹಣವನ್ನು ಸಂಪಾದಿಸಲು ಇದೆ ಎಂದು ಅದೇ ಸಭೆಯಲ್ಲಿ ಹೇಳತೊಡಗುತ್ತಾರೆ.

ಅನೇಕ ಜನರು ಅಮ್ರ್ ಬಿಲ್-ಮಾರೂಫ್ (ಹಿತವಚನ ಹೇಳುವ) ಮತ್ತು ನಹೀ ಅನಿಲ್ ಮುಂಕರ್ (ಕೆಟ್ಟತನದಿಂದ ದೂರಮಾಡುವ) ಉದ್ದೇಶವನ್ನು ಜೀವನೋಪಾಯಕ್ಕಾಗಿ ಘೋಷಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಎಲ್ಲರೂ ಹಾಗೆ ಅಲ್ಲ.

ಅಲ್ಲಾಹ್ ಹಾಗೂ ಅವನ ಸಂದೇಶವಾಹಕ ಹಝ್ರತ್ ಪೈಗಂಬರ್(ಸ) ಅವರ ಮಾತುಗಳನ್ನು ಜನರಿಗೆ ತಲುಪಿಸುವ ಶುದ್ಧ ಹೃದಯದ ಜನರಿದ್ದಾರೆ, ಏಕೆಂದರೆ ಅವರು ಅಮ್ರ್ ಬಿಲ್-ಮಾರೂಫ್ (ಹಿತವಚನ ಹೇಳುವ) ಮತ್ತು ನಹಿ ಅನಿಲ್ ಮುಂಕರ್ (ಕೆಟ್ಟತನದಿಂದ ದೂರಮಾಡುವ) ದಿಂದ ಪ್ರಯತ್ನಿಸುವವರು ಅದನ್ನು ತಮ್ಮ ಕರ್ತವ್ಯವೆಂದು ಪರಿಗಣಿಸುತ್ತಾರೆ ಮತ್ತು ಅವರು ಕೇವಲ ಅಲ್ಲಾಹನ ಸಂತೃಪ್ತಿ ಪಡೆಯುವ ಉದ್ದೇಶ ಹೊಂದಿರುತ್ತಾರೆ. ಉಪದೇಶ ನೀಡುವ ಸ್ಥಾನ ಎಷ್ಟೊಂದು ಉನ್ನತವಾದ ಸ್ಥಾನವಾಗಿದೆ ಎಂದರೆ ಅದು ಪ್ರವಾದಿತ್ವದ ಘನತೆಯನ್ನು ಒಳಗೊಂಡಿರುತ್ತದೆ, ಅದಕ್ಕೆ ಷರತ್ತೇನೆಂದರೆ ದೈವ ಇಚ್ಛೆ ಹೊಂದಿ ಆ ಕಾರ್ಯ ನಿರ್ವಹಿಸಬೇಕು.

ಬೋಧಕನು ತನ್ನಲ್ಲಿಯೇ ವಿಶೇಷ ರೀತಿಯ ಸುಧಾರಣೆಯನ್ನು ಕಂಡುಕೊಳ್ಳುತ್ತಾನೆ ಏಕೆಂದರೆ ಅವನು ಹೇಳುವುದನ್ನು ತನ್ನ ಕ್ರಿಯೆಗಳ ಮೂಲಕ ಜನರಿಗೆ ತೋರಿಸುವುದು ಅವಶ್ಯಕ.

**(ಮಲ್‌ಫೂಝಾತ್, ಸಂಪುಟ-1, ಪುಟ-505, ಪ್ರಕಟಿತ 2018 ಖಾದಿಯಾನ್)**

**ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಮಾನವರಿಗೆ ಗೌರವವನ್ನು ನೀಡಿದ್ದಾನೆ ಮತ್ತು ವಿಶೇಷ ಸಮೂದಾಯಗಳಿಗೆ ಅಲ್ಲ, ಆದ್ದರಿಂದ ಸಮೂದಾಯಗಳು ಪರಸ್ಪರರ ಬಗ್ಗೆ ಹೆಮ್ಮೆಪಡಬಾರದು.**

ಸೈಯ್ಯಿದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಬನೀ ಇಸ್ರಈಲ್‌ನ ಆಯತ್ 71 **ವಲಖದ್ ಕರ್‍ರಮ್‌ನಾ ಬನೀ ಆದಮ ವಹಮಲ್‌ನಾಹುಮ್ ಫಿದ್ದುಬುರಿ ವಲ್‌ಫಜ್‌ರಿ ವರಝಖ್‌ನಾಹುಮ್ ಮಿನತ್ತೈಯಿಬಾತಿ ವ ಫಝ್ಝಲ್‌ನಾಹುಮ್ ಅಲಾ ಕಸೀರಿಮ್ಮಿಮ್ಮನ್ ಖಲಖ್‌ನಾ ತಫ್‌ಝೀಲ** ನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

*(ಪುಟ-08ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ರಸೂಲುಲ್ಲಾಹ್(ಸ) ಈಗ ಏಕದೇವನ ಗೌರವದ ವಿಷಯ ಬಂದಾಗ ಮತ್ತು ಶಿರ್ಕಿನ ಘೋಷಣೆ ಮೈದಾನದಲ್ಲಿ ಮಾಡಲಾದಾಗ ಅವರ ಆತ್ಮ ಅಸಮಾಧಾನಗೊಂಡಿತು. ಅವರು ಅತ್ಯಂತ ಆವೇಶದಿಂದ ಸಹಾಬಿಯರ ಕಡೆಗೆ ನೋಡುತ್ತಾ ಕೇಳಿದರು: ನೀವೇಕೆ ಉತ್ತರಿಸುತ್ತಿಲ್ಲ. ಸಹಾಬಿಯರು ಕೇಳಿದರು: ಯಾ ರಸೂಲಲ್ಲಾಹ್, ನಾವೇನು ಹೇಳಬೇಕು? ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: **ವಲ್ಲಾಹು ಅಅ್‌ಲ ವ ಅಜಲ್ಲು– ಅಲ್ಲಾಹು ಅಅ್‌ಲ ವ ಅಜಲ್ಲು–** ಹುಬಲಿನ ವೈಭವ ಉನ್ನತಗೊಂಡಿತು ಎಂದು ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳಿರಿ. **ಅಲ್ಲಾಹು ವಹ್‌ದಹೂ ಲಾ ಶರೀಕಲಹೂ–** ಏಕನೂ ಸಹಭಾಗಿ ಇಲ್ಲದವನೂ ಆದ ಅಲ್ಲಾಹನೇ ಆದರಣೀಯನು ಮತ್ತು ಅವನ ವೈಭವ ಉನ್ನತವಾಗಿದೆ ಎಂದು ಹೇಳಿರಿ.

ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲೀ ನನ್ನಿಂದ ಮತ್ತು ನಾನು ಅಲಿಯಿಂದ. ಆಗ ಜಿಬ್ರೀಲ್(ಅ) ಹೇಳಿದರು: ನಾನು ನಿಮ್ಮಿಬ್ಬರಿಂದಲೂ ಆಗಿದ್ದೇನೆ.

ಹಝ್ರ್‌ರತ್ ಪೈಗಂಬರ್(ಸ) ಅವರು ತಲೆ ಎತ್ತಿ ಜನರತ್ತ ನೋಡಿದಾಗ ಹಝ್ರ್‌ರತ್ ಅಬು ತಲ್ಹಾ(ರ) ಹೇಳುತ್ತಿದ್ದರು. **ಬಿಅಬಿ ಅನ್ತ ವ ಉಮ್ಮೀ ಯಾ ರಸೂಲಲ್ಲಾಹ್, ಲಾ ಯುಸೀಬುಕ ಸಹ್‌ಮುಮ್, ನಹ್‌ರಿ ದೂನ ನಹ್ರಿಕ** ನನ್ನ ತಂದೆ ತಾಯಿಯವರು ನಿಮ್ಮ ಮೇಲೆ ಅರ್ಪಿತವಾಗಲಿ, ನೀವು ಯಾವುದೇ ಕಾರಣಕ್ಕು ನಿಮ್ಮ ತಲೆ ಎತ್ತ ಬೇಡಿ ಇಲ್ಲದಿದ್ದರೆ ಅವರ ಬಾಣಗಳು ನಿಮಗೆ ತಾಗುತ್ತದೆ. ನನ್ನ ಎದೆಯು ನಿಮ್ಮ ಎದೆಯ ಮುಂದೆ ಇದೆ.

ಹಝ್ರ್‌ರತ್ ತಲ್ಹಾ ಹೇಳಿದರು: **ಅಲ್–ಹಮ್ದು ಲಿಲ್ಲಾಹ್ ಕುಲ್ಲುಮುಸೀಬತಿನ್ ಬಅದಹೂ ಜಲಾಲ್–** ಅಂದರೆ: ಎಲ್ಲಾ ಸ್ತುತಿಗಳು ಸರ್ವಶಕ್ತನಾದ ಅಲ್ಲಾಹನಿಗೆ ಸೇರಿವೆ. ನಿಮ್ಮ(ಸ) ನಂತರ ಪ್ರತಿ ತೊಂದರೆಯೂ ಚಿಕ್ಕದಾಗಿದೆ.

ಉಹುದ್ ಯುದ್ಧದ ನಂತರ, ಒಬ್ಬ ವ್ಯಕ್ತಿ ತಲ್ಹಾರನ್ನು ಕೇಳಿದನು, ಬಾಣಗಳು ಅವರ ಕೈಗೆ ಬಿದ್ದಾಗ, ಅವರು ನೋವು ಅನುಭವಿಸಲಿಲ್ಲವೇ? ಮತ್ತು ನಿಮ್ಮ ಬಾಯಿಯಿಂದ ಉಫ್ ಎಂದು ಧ್ವನಿ ಹೊರಡಲಿಲ್ಲವೇ? ಅದಕ್ಕೆ ತಲ್ಹಾ(ರ) ಉತ್ತರಿಸಿದರು. ನೋವು ಕೂಡ ಇತ್ತು ಮತ್ತು ಉಫ್ ಎಂದು ಸಹ ಹೊರಬರಲು ಬಯಸಿತು, ಆದರೆ ನಾನು ಹಾಗೆ ಮಾಡಿದರೆ ನನ್ನ ಕೈ ಚಲಿಸಬಹುದ ಮತ್ತು ಬಾಣವು ಹಝ್ರ್‌ರತ್ ಪೈಗಂಬರ್(ಸ) ಅವರ ಮುಖಕ್ಕೆ ತಾಗಬಹುದು ಎಂದು ಮಾಡಲಿಲ್ಲ.

ಹಝ್ರ್‌ರತ್ ಸಅದ್ ಬಿನ್ ವಖಾಸ್(ರ)ರಿಗೆ ಹಝ್ರ್‌ರತ್ ಪೈಗಂಬರ್(ಸ) ಸ್ವತಃ ಬಾಣಗಳನ್ನು ಕೊಡುತ್ತಿದ್ದರು ಮತ್ತು ಹಝ್ರ್‌ರತ್ ಸಅದ್(ರ) ಶತ್ರುಗಳ ಮೇಲೆ ನಿರಂತರವಾಗಿ ಅವುಗಳನ್ನು ಚಲಾಯಿಸುತ್ತಿದ್ದರು. ಒಂದು ಬಾರಿ ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಸಅದ್(ರ)ರೊಡನೆ ಹೀಗೆ ಹೇಳಿದರು: ನಿನ್ನ ಮೇಲೆ ನನ್ನ ತಂದೆತಾಯಂದಿರು ಅರ್ಪಿತವಾಗಲಿ. ನೀನು ನಿರಂತರವಾಗಿ ಬಾಣಗಳನ್ನು ಚಲಾಯಿಸುತ್ತಾ ಇರು. ಹಝ್ರ್‌ರತ್ ಸಅದ್(ರ) ತನ್ನ ಮರಣದ ವರೆಗೆ ಈ ವಾಕ್ಯವನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಹಝ್ರ್‌ರತ್ ಅಬು ದುಜಾನಾ(ರ) ಅವರು ಉಹುದ್ ಯುದ್ಧದ ಸಮಯದಲ್ಲಿ ಹಝ್ರ್‌ರತ್ ಪೈಗಂಬರ್(ಸ)ರನ್ನು ಗುರಾಣಿಯಾಗಿ ರಕ್ಷಿಸುತ್ತಿದ್ದರು ಎಂಬ ವರದಿ ಇದೆ. ಹೀಗೆ ಅವರು ಹಝ್ರ್‌ರತ್ ಪೈಗಂಬರ್(ಸ) ಅವರ ನಿಮ್ಮೆ(ಸ) ಕಡೆ ಮುಖ ಮಾಡಿ ನಿಂತರು. ಯಾವುದೇ ಬಾಣವು ಬಂದರೆ ಅದು ಹಝ್ರ್‌ರತ್ ಅಬು ದುಜಾನಾ ಅವರ ಬೆನ್ನಿಗೆ ಹೊಡೆಯುತ್ತಿತ್ತು. ಅವರು ಬಾಗಿ ನಿಂತು ಎಲ್ಲಾ ಬಾಣಗಳನ್ನು ತಮ್ಮ ಬೆನ್ನಿನ ಮೇಲೆ ತೆಗೆದುಕೊಳ್ಳುತ್ತಿದ್ದರು. ಅವರ ಬೆನ್ನಿಗೆ ಅಸಂಖ್ಯಾತ ಬಾಣಗಳು ಕೂಡ ಅಂಟಿಕೊಂಡಿದ್ದವು.

**ಉಹುದ್ ಯುದ್ಧದಲ್ಲಿ ಸಹಾಬಿಗಳ ಜೀವಬಲಿದಾನದ ವಿವರಾತ್ಮಕ ಪ್ರಸ್ತಾವನೆ**

**ಪ್ಯಾಲಸ್ತೀನ್‌ನ ಸಾಮಾನ್ಯ ಸ್ಥಿತಿಗಳಿಗೆ ಹಾಗೂ ಯೆಮನ್ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆವಿನ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **‘ಮಸ್ಜಿದ್ ಮುಬಾರಕ್’** ನಿಂದ **02–02–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಉಹುದ್ ಯುದ್ಧದ ಘಟನೆಗಳಲ್ಲಿ ಸಹಾಬಿಯರ ತ್ಯಾಗಗಳು ಮತ್ತು ಅವರ ಪ್ರವಾದಿ ಪ್ರೇಮದ ಉದಾಹರಣೆಗಳನ್ನು ನಾನು ಪ್ರಸ್ತುತಪಡಿಸಿದ್ದೆ. ಅವುಗಳಲ್ಲಿ ಹಝ್ರ್‌ರತ್ ಅಲಿ(ರ)ರ ಶೌರ್ಯದ ಘಟನೆಗಳ ಪ್ರಸ್ತಾಪ ಸಹ ವರದಿಗಳಲ್ಲಿ ಲಭಿಸುತ್ತವೆ. ಹಝ್ರ್‌ರತ್ ಅಲಿ(ರ)ರವರ ಬಗ್ಗೆ ಒಂದು ವರದಿ ಹೀಗಿದೆ: ಉಹುದ್ ಯುದ್ಧದ ಸಂದರ್ಭದಲ್ಲಿ ಇಬ್ನು ಕಮಿಅ ಹಝ್ರ್‌ರತ್ ಮುಸ್‌ಅಬ್ ಬಿನ್ ಉಮೈರ್(ರ)ರನ್ನು ಶಹೀದ್ ಮಾಡಿ ತಾನು ಹಝ್ರ್‌ರತ್ ಪೈಗಂಬರ್(ಸ)ರನ್ನು ಶಹೀದ್ ಮಾಡಿದ್ದೇನೆ ಎಂದು ಭಾವಿಸಿ “ನಾನು ಮುಹಮ್ಮದನ್ನು ವಧಿಸಿದ್ದೇನೆ” ಎಂದು ಖುರೈಶಿಯರೊಡನೆ ಹೇಳಿದನು. ಹಝ್ರ್‌ರತ್ ಮುಸ್‌ಅಬ್(ರ) ಶಹೀದ್ ಆದ ನಂತರ ಹಝ್ರ್‌ರತ್ ಪೈಗಂಬರ್(ಸ) ಧ್ವಜವನ್ನು ಹಝ್ರ್‌ರತ್ ಅಲಿ(ರ)ರಿಗೆ ಒಪ್ಪಿಸಿದರು.

(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ–529, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರ್‌ರತ್ ಅಲಿ(ರ) ಸತ್ಯನಿಷೇಧಿಗಳ ಧ್ವಜವಾಹಕರನ್ನು ಒಬ್ಬೊಬ್ಬರನ್ನಾಗಿ ವಧಿಸಿದರು. ಹಝ್ರ್‌ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಹಝ್ರ್‌ರತ್ ಅಲಿ(ರ) ಸತ್ಯನಿಷೇಧಿಯಾದ ಅಮ್ರ್ ಬಿನ್ ಅಬ್ದುಲ್ಲಾಹ್ ಜಮ್‌ಹಿ ಮತ್ತು ಶೈಬ ಬಿನ್ ಮಾಲಿಕ್‌ರನ್ನು ವಧಿಸಿದರು. ಹಝ್ರ್‌ರತ್ ಅಲಿ(ರ)ರ ಕುರಿತು ಜಿಬ್ರೀಲ್(ಅ) ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ಇವರು ಸಹಾನುಭೂತಿ ತೋರಿಸಲ್ಪಡಲು ಅರ್ಹರು. ಆಗ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲೀ ನನ್ನಿಂದ ಮತ್ತು ನಾನು ಅಲಿಯಿಂದ. ಆಗ ಜಿಬ್ರೀಲ್(ಅ) ಹೇಳಿದರು: ನಾನು ನಿಮ್ಮಿಬ್ಬರಿಂದಲೂ ಆಗಿದ್ದೇನೆ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–65, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಈ ಸಂಗತಿಯನ್ನು ಶಿಯಾ ಸಹೋದರರು ಅತಿಶಯೋಕ್ತಿ ಮಾಡಿಕೊಂಡು ಬಹಳಷ್ಟು ಹಿಗ್ಗಿಸಿ ದೊಡ್ಡದಾಗಿಸಿ ಹೇಳುತ್ತಾರೆ.

ಹಝ್ರತ್ ಅಲೀ(ರ) ಹೇಳುತ್ತಾರೆ: ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರಿಂದ ಜನರು ಸರಿದು ಹೋದ ನಂತರ ನಾನು ಶಹೀದರ ಮೃತದೇಹಗಳನ್ನು ನೋಡಲು ಆರಂಭಿಸಿದೆ. ಅವುಗಳಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಕಾಣಲಿಲ್ಲ. ಆಗ ನಾನು ಹೇಳಿದೆ: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಓಡಿ ಹೋಗುವವರಲ್ಲ ಹಾಗೂ ನಾನು ಅವರನ್ನು ಶಹೀದರ ನಡುವೆಯೂ ಕಾಣಲಿಲ್ಲ. ಆದರೆ ಅಲ್ಲಾಹನು ನಮ್ಮೊಡನೆ ಅಸಂತುಷ್ಟನಾಗಿದ್ದಾನೆ ಮತ್ತು ಅವನು ತನ್ನ ಪ್ರವಾದಿಯನ್ನು ಎತ್ತಿದ್ದಾನೆ. ಆದ್ದರಿಂದ ನನಗೆ ಈಗ ಒಳಿತೇನೆಂದರೆ, ಕೊಲ್ಲಲ್ಪಡುವ ತನಕ ಹೋರಾಡುವುದಾಗಿದೆ. ಅನಂತರ ನಾನು ನನ್ನ ಖಡ್ಗದ ಕವಚವನ್ನು ಒಡೆದೆ ಮತ್ತು ಸತ್ಯನಿಷೇಧಿಗಳ ಮೇಲೆ ಹಲ್ಲೆ ನಡೆಸಿದೆ. ಅವರು ಎಲ್ಲೆಡೆ ಚದುರಿದಾಗ ಹಝ್ರತ್ ಪೈಗಂಬರ್(ಸ)ರನ್ನು ಅವರ ನಡುವೆ ನಾನು ಕಂಡೆನು. (ಅಸದುಲ್‌ಗ್ಬಾಬ, ಸಂಪುಟ–4, ಪುಟ–94, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಸಈದ್ ಬಿನ್ ಮುಸ್ಸೆಯಿಬ್(ರ) ವರದಿ ಮಾಡುತ್ತಾರೆ ಹಝ್ರತ್ ಅಲಿ(ರ)ರವರನ್ನು ಉಹುದ್ ಯುದ್ಧದಲ್ಲಿ ಹದಿನಾರು ಗಾಯಗಳಾಗಿದ್ದವು. (ಅಸದುಲ್‌ಗ್ಬಾಬ, ಸಂಪುಟ–4, ಪುಟ–93, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಹುದ್ ಯುದ್ಧದಿಂದ ಮರಳಿ ಬಂದು ಹಝ್ರತ್ ಅಲಿ(ರ) ಹಝ್ರತ್ ಫಾತಿಮ(ರ)ರಿಗೆ ತನ್ನ ಖಡ್ಗವನ್ನು ತೊಳೆಯಲು ನೀಡುತ್ತಾ ಹೀಗೆ ಹೇಳಿದರು: ಇಂದು ಈ ಖಡ್ಗ ಬಹಳ ಹಿರಿದಾದ ಕೆಲಸವನ್ನು ಮಾಡಿದೆ. ಇದನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲೀ, ಕೆಲಸ ಮಾಡಿದ್ದು ನಿನ್ನ ಖಡ್ಗ ಮಾತ್ರವಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಆರೇಳು ಸಹಾಬಿಯರ ಹೆಸರುಗಳನ್ನು ಎತ್ತಿ ಹೀಗೆ ಹೇಳಿದರು: ಅವರ ಖಡ್ಗಗಳು ಸಹ ಕೌಶಲ ತೋರಿಸಿವೆ.
(ಮಸಾಎಬ್ ಕೆ ನೀಚೆ ಬರ್ಕತೋಂ ಕೆ ಖಝಾನೆ ಮಖ್ಫೀ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–59)

ಹಝ್ರತ್ ಅಬು ತಲ್ಹಾ ಅನ್ಸಾರಿ(ರ) ಅವರ ಬಗ್ಗೆ ಈ ಉಲ್ಲೇಖದಲ್ಲಿ ಹೀಗೆ ಪ್ರಸ್ತಾಪವಿದೆ ಹಝ್ರತ್ ಅನಸ್(ರ) ಹೇಳುತ್ತಾರೆ ಉಹದ್ ಯುದ್ಧ ನಡೆದಾಗ ಜನರು ಸೋಲಿಸಲ್ಪಟ್ಟರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಂದ ಬೇರ್ಪಟ್ಟ ಸಂದರ್ಭದಲ್ಲಿ ಹಝ್ರತ್ ಅಬು ತಲ್ಹಾ(ರ) ಹಝ್ರತ್ ಪೈಗಂಬರ್(ಸ) ಅವರ ಮುಂದೆ ಗುರಾಣಿಯಾಗಿ ಸ್ಥಿರವಾಗಿ ನಿಂತರು. ಹಝ್ರತ್ ಅಬು ತಲ್ಹಾ(ರ) ಎಂತಹ ಬಿಲ್ಲುಗಾರರಾಗಿದ್ದರು ಎಂದರೆ ಅವರು ಬಹಳ ಬಲದಿಂದ ಬಿಲ್ಲು ಚಲಾಯಿಸುತ್ತಿದ್ದರು. ಆ ದಿನ ಅವರು ಎರಡು ಅಥವಾ ಮೂರು ಬಿಲ್ಲುಗಳನ್ನು ಮುರಿದರು. ಅಂದರೆ, ಬಿಲ್ಲು ಮುರಿಯುವಷ್ಟು ಬಲವಾಗಿ ಚಲಾಯಿಸುತ್ತಿದ್ದರು ಮತ್ತು ಆ ಸಮಯದಲ್ಲಿ ಸಹಾಬಿಗಳ ನಡುವೆ ಯಾವುದೇ ವ್ಯಕ್ತಿ ಬಾಣಗಳ ಬತ್ತಳಿಕೆಯನ್ನು ಹೊತ್ತುಕೊಂಡು ಹೋಗುತ್ತಿದ್ದರೆ ಹಝ್ರತ್ ಪೈಗಂಬರ್(ಸ) ರವರು ಅವರಿಗೆ "ಆ ಬಾಣಗಳನ್ನು ಹಝ್ರತ್ ಅಬೂತಲ್ಹ(ರ) ಅವರಿಗೆ ನೀಡಿರಿ" ಎಂದು ಹೇಳುತ್ತಿದ್ದರು. ಅಂದರೆ ಅವರು ಉತ್ತಮ ಬಿಲ್ಲುಗಾರರಾಗಿದ್ದಾರೆ ಅವರಿಗೆ ನಿಮ್ಮ ಬಾಣಗಳನ್ನು ನೀಡಿ. ಇವರು ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಮುಂದೆ ನಿಂತಿದ್ದರು. ಹಝ್ರತ್ ಅನಸ್(ರ) ಹೇಳುತ್ತಿದ್ದರು ಹಝ್ರತ್ ಪೈಗಂಬರ್(ಸ) ಅವರು ತಲೆ ಎತ್ತಿ ಜನರತ್ತ ನೋಡಿದಾಗ ಹಝ್ರತ್ ಅಬು ತಲ್ಹಾ(ರ) ಹೇಳಿದರು. **ಬಿಅಬಿ ಅನ್ತ ವ ಉಮ್ಮೀ ಯಾ ರಸೂಲಲ್ಲಾಹ್, ಲಾ ಯುಸೀಬುಕ ಸಹ್‌ಮುಮ್, ನಹ್‌ರಿ ದೂನ ನಹ್ರಿಕ** ನನ್ನ ತಂದೆ ತಾಯಿಯವರು ನಿಮ್ಮ ಮೇಲೆ ಅರ್ಪಿತವಾಗಲಿ, ನೀವು ಯಾವುದೇ ಕಾರಣಕ್ಕು ನಿಮ್ಮ ತಲೆ ಮೇಲಕ್ಕೆ ಎತ್ತ ಬೇಡಿ ಇಲ್ಲದಿದ್ದರೆ ಅವರ ಬಾಣಗಳು ನಿಮಗೆ ತಾಗುತ್ತದೆ. ನನ್ನ ಎದೆಯು ನಿಮ್ಮ ಎದೆಯ ಮುಂದೆ ಇದೆ.

ಈ ಉಲ್ಲೇಖವನ್ನು ಬುಖಾರಿಯಿಂದ ಪಡೆಯಲಾಗಿದೆ.
(ಸಹೀಹ್ ಬುಖಾರಿ ಕಿತಾಬುಲ್ ಮಘಾಝಿ, ಹದೀಸ್–4064)
(ತಬಕಾತುಲ್–ಕುಬ್ರಾ, ಸಂಪುಟ–3, ಪುಟ 384–385, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಹಝ್ರತ್ ಅಬು ತಲ್ಹಾ(ರ) ಅವರು ಹಝ್ರತ್ ಪೈಗಂಬರ್(ಸ) ರನ್ನು ಒಂದೇ ಗುರಾಣಿಯಿಂದ ರಕ್ಷಿಸುತ್ತಿದ್ದರು ಮತ್ತು ಹಝ್ರತ್ ಅಬು ತಲ್ಹಾ(ರ) ಅವರು ಉತ್ತಮ ಬಿಲ್ಲುಗಾರರಾಗಿದ್ದರು. ಅವರು ಬಾಣಗಳನ್ನು ಹೊಡೆದಾಗ, ಹಝ್ರತ್ ಪೈಗಂಬರ್(ಸ) ಅವರ ಬಾಣಗಳು ಎಲ್ಲಿ ಬಿದ್ದಿವೆ ಎಂದು ಇಣುಕಿ ನೋಡುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್–ಜಿಹಾದ್, ಹದೀಸ್–2902)

ಉಹುದ್ ಯುದ್ಧದಲ್ಲಿ ಹಝ್ರತ್ ಅಬು ತಲ್ಹಾ(ರ) ಅವರ ಈ ಕವಿತೆಯ ಪಠಣವನ್ನು ಉಲ್ಲೇಖಿಸಲಾಗಿದೆ:

**ವಜ್‌ಹಿ ಲಿವಜ್‌ಹಿಕಲ್ ವಿಖಾಉ**

**ವ ನಫ್ಸಿ ಲಿನಫ್ಸಿಕಲ್‌ಫಿದಾಉ**

ನನ್ನ ಮುಖ ನಿಮ್ಮ(ಸ)ರ ಮುಖವನ್ನು ರಕ್ಷಿಸಲು ಇದೆ ಮತ್ತು ನನ್ನ ಪ್ರಾಣವು ನಿಮ್ಮ(ಸ)ರ ಪ್ರಾನಕ್ಕಾಗಿ ತ್ಯಾಗವಾಗಿದೆ.
(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–4, ಪುಟ–665, ಮುಸ್ನದ್ ಹದೀಸ್–13781, ಆಲಂ ಅಲ್–ಕುತುಬ್ ಬೈರುತ್ 1998)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಅಬೂತಲ್ಹ ಅನ್ಸಾರೀ(ರ)ರ ಕುರಿತು ಹೀಗೆ ಬರೆದಿರುವರು: ಬಿಲ್ಲುಗಾರಿಕೆ ಮಾಡುತ್ತಾ ಮೂರು ಬಿಲ್ಲುಗಳು ಅವರಿಂದ ಒಡೆದು ಹೋಯಿತು. ಶತ್ರುಗಳ ಬಾಣಗಳ ಮುಂದೆ ನಿಂತುಕೊಂಡು ಹಝ್ರತ್ ಪೈಗಂಬರ್(ಸ)ರ ಶರೀರವನ್ನು ಅವರು ತನ್ನ ಗುರಾಣಿಯಿಂದ ರಕ್ಷಣೆ ಮಾಡಿದರು. (ಸೀರತ್ ಖಾತಮನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–495)

ಮತ್ತೆ ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ(ರ) ಅವರ ಉಲ್ಲೇಖವಿದೆ. ಅವರು (ಹಝ್ರತ್ ಅಬುತಲ್ಹಾ(ರ)) ಅನ್ಸಾರಿಯಾಗಿದ್ದರು. ಅವರು ಖುರೈಶ್ ಜನರಿಂದ ಆಗಿದ್ದರು. ಉಹುದ್ ಯುದ್ಧದ ದಿನದಂದು, ಅವರು ಹಝ್ರತ್ ಪೈಗಂಬರ್(ಸ.ಅ) ರವರನ್ನು ರಕ್ಷಿಸುವಾಗ ಈ ಬಾಣಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುತ್ತಿದ್ದರು. ಹಝ್ರತ್ ತಲ್ಹಾ(ರ) ಉಹುದ್ ದಿನದಂದು ಹಝ್ರತ್ ಪೈಗಂಬರ್(ಸ) ರೊಂದಿಗೆ ಸೇರಿದರು. ಅವರು ಆ ದಿನ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಸ್ಥಿರವಾಗಿ ನಿಂತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರೊಂದಿಗೆ ಮರಣದ ಮೇಲೆ ಬೈಅತ್ ಮಾಡಿದರು. ಮಾಲಿಕ್ ಬಿನ್ ಝುಹೈರ್ ಹಝ್ರತ್ ಪೈಗಂಬರ್(ಸ) ಅವರಿಗೆ ಬಾಣ ಹೊಡೆದಾಗ ಹಝ್ರತ್ ತಲ್ಹಾ(ರ) ರವರು ಹಝ್ರತ್ ಪೈಗಂಬರ್(ಸ)ರವರ ಮುಖವನ್ನು ತನ್ನ ಕೈಯಿಂದ ರಕ್ಷಿಸಿದರು. ಆ ಬಾಣವು ಅವರ ಕಿರು ಬೆರಳಿಗೆ ತಾಗಿತು ಆದ ಕಾರಣ ಅದು ನಿಷ್ಪ್ರಯೋಜಕವಾಯಿತು. ಮೊದಲ ಬಾಣ ಅವರಿಗೆ ಬಂದು ತಾಗಿದಾಗ ಅವರು ನೋವಿನಿಂದ 'ಸೀ' ಎಂಬ ಧ್ವನಿ ಹೊರಹಾಕಿದರು. ಹಝ್ರತ್ ಪೈಗಂಬರ್(ಸ)ರವರು ಹೇಳಿದರು: ಅವರು ಬಿಸ್ಮಿಲ್ಲಾಹ್ ಎಂದು ಹೇಳುತ್ತಿದ್ದರೆ ಜನರು ಅವನತ್ತ ನೋಡುವ ರೀತಿಯಲ್ಲಿ ಅವರು ಸ್ವರ್ಗವನ್ನು ಪ್ರವೇಶಿಸುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಭಾಗ–3, ಪುಟ–162–163, ದಾರುಲ್ ಕುತುಬ್ ಇಲ್ಮಿಯ ಬೈರುತ್ 1990)

ಇದೇ ಘಟನೆಯನ್ನು ಸೀರತ್ ಅಲ್–ಹಲ್ಬಿಯಾದಲ್ಲಿನ ಒಂದು ವರದಿಯಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ: ಖೈಸ್ ಬಿನ್ ಅಬು ಹಾಝಿಮ್ ಹೇಳುತ್ತಾರೆ, ಉಹುದ್ ದಿನದಂದು ಹಝ್ರತ್ ಪೈಗಂಬರ್(ಸ)ರನ್ನು ಬಾಣಗಳಿಂದ ರಕ್ಷಿಸುವಾಗ ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ(ರ) ಅವರ ಕೈಯನ್ನು ಜೋಮು ಹಿಡಿದ ಸ್ಥಿತಿಯಲ್ಲಿ ನೋಡಿದೆ. ಒಂದು ಹೇಳಿಕೆಯ ಪ್ರಕಾರ ಅದರಲ್ಲಿ ಈಟಿ ತಾಗಿತ್ತು ಅದರಿಂದ ಎಷ್ಟು ರಕ್ತ ಹರಿಯಿತು ಎಂದರೆ ಅದರ ದೌರ್ಬಲ್ಯದಿಂದ ಅವರು ಮೂರ್ಛೆಹೋಗಿದ್ದರು. ಹಝ್ರತ್ ಅಬೂಬಕರ್(ರ.ಅ) ಅವರು ಪ್ರಜ್ಞೆ ಬರುವವರೆಗೂ ಅವರ ಮೇಲೆ ನೀರು ಚಿಮುಕಿಸಿದರು. ಅವರಿಗೆ ಪ್ರಜ್ಞೆ ಬಂದ ತಕ್ಷಣ ಅವರು ಹಝ್ರತ್ ಪೈಗಂಬರ್(ಸ)ರ ಸ್ಥಿತಿ ಹೇಗಿದೆ ಎಂದು ಕೇಳಿದರು. ಹಝ್ರತ್ ಅಬೂಬಕರ್(ರ) ಅವರಿಗೆ ಅವರು ಆರೋಗ್ಯವಾಗಿದ್ದಾರೆ ಮತ್ತು ಅವರೇ ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾರೆ ಎಂದು ಹೇಳಿದರು.

ಹಝ್ರತ್ ತಲ್ಹಾ ಹೇಳಿದರು: **ಅಲ್–ಹಮ್ದು ಲಿಲ್ಲಾಹ್ ಕುಲ್ಲುಮುಸೀಬತಿನ್ ಬಅದಹೂ ಜಲಾಲ್–** ಅಂದರೆ: ಎಲ್ಲಾ ಸ್ತುತಿಗಳು ಸರ್ವಶಕ್ತನಾದ ಅಲ್ಲಾಹನಿಗೆ ಸೇರಿವೆ. ನಿಮ್ಮ(ಸ) ನಂತರ ಪ್ರತಿ ತೊಂದರೆಯೂ ಚಿಕ್ಕದಾಗಿದೆ. (ಸೀರತ್ ಹಲಾಬಿಯಾಹ್, ಸಂಪುಟ 2, ಪುಟ 324, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಝ್ರತ್ ತಲ್ಹಾ(ರ) ಅವರ ಪುತ್ರಿಯರಾದ ಆಯಿಷಾ ಮತ್ತು ಉಮ್ಮು ಇಸ್ಹಾಕ್ ಅವರು ಹೇಳಿದರು: ಉಹುದ್ ದಿನದಂದು ನಮ್ಮ ತಂದೆಗೆ ಇಪ್ಪತ್ನಾಲ್ಕು ಗಾಯಗಳಾಗಿದ್ದು, ಅದರಲ್ಲಿ ಒಂದು ತಲೆಗೆ ಚೌಕಾಕಾರದ ಗಾಯವಾಗಿದ್ದು, ಕಾಲಿನ ರಕ್ತನಾಳವು ತುಂಡಾಗಿತ್ತು. ಬೆರಳಿಗೆ ಪಾರ್ಶ್ವವಾಯು ಆಗಿತ್ತು ಮತ್ತು ಉಳಿದ ಗಾಯಗಳು ದೇಹದ ಮೇಲಿದ್ದವು. ಅವರು ಮೂರ್ಛೆ ಹೋಗಿದ್ದರು. ಹಝ್ರತ್ ಪೈಗಂಬರ್(ಸ) ಅವರ

ಮುಂಭಾಗದ ಎರಡು ಹಲ್ಲುಗಳು ಮುರಿದುಹೋಗಿದ್ದವು. ಅವರ ಮುಖಕ್ಕೂ ಗಾಯವಾಗಿದ್ದವು. ಹಝ್ರತ್ ಪೈಗಂಬರ್(ಸ)ರವರ ಮೇಲೂ ಮೂರ್ಛೆಯ ಪ್ರಾಬಲ್ಯವಿತ್ತು. ಹಝ್ರತ್ ತಲ್ಹಾ(ರ) ಹಝ್ರತ್ ಪೈಗಂಬರ್(ಸ) ಅವರನ್ನು ತಮ್ಮ ಬೆನ್ನಿನ ಮೇಲೆ ಇರಿಸಿಕೊಂಡು ಹೇಗೆ ಹಿಮ್ಮೆಟ್ಟಿದರು ಎಂದರೆ, ಅವರು ಯಾವುದೇ ಅವಿಶ್ವಾಸಿಯನ್ನು ಭೇಟಿಯಾದಾಗ ಅವನೊಂದಿಗೆ ಹೋರಾಡಿ ಮುಂದೆ ಸಾಗುತ್ತಿದ್ದರು ಹೀಗೆ ಅವರು ಹಝ್ರತ್ ಪೈಗಂಬರ್(ಸ)ಅವರನ್ನು ಕಣಿವೆಗೆ ಕರೆದೊಯ್ದು ಅವರನ್ನು ಕೂರಿಸಿದರು.

(ಅತ್ತಬಖಾತುಲ್ ಕುಬರ್, ಲಿಇಬ್ನೆ ಸಾದ್, ಭಾಗ-3, ಪುಟ-163, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಉಹುದ್ ಯುದ್ಧ ಮತ್ತು ಧೈರ್ಯಶಾಲಿ ಹಾಗೂ ನಿಷ್ಠಾವಂತ ಸಹಾಬಿಯವರ ಉಲ್ಲೇಖವನ್ನು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಈ ರೀತಿಯಲ್ಲಿ ವಿವರಿಸುತ್ತಾರೆ, ಉಹುದ್ ಕದನದ ದಿನದಂದು ಖಾಲಿದ್ ಬಿನ್ ವಲೀದ್ ಮುಸ್ಲಿಮರ ಮೇಲೆ ಹಠಾತ್ ದಾಳಿ ಮಾಡಿದಾಗ ಮುಸ್ಲಿಮರಲ್ಲಿ ಗೊಂದಲ ಸೃಷ್ಟಿಯಾಯಿತು, ಕೆಲವು ಸಹಾಬಿಯವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಓಡಿಹೋದರು. ಹಝ್ರತ್ ಪೈಗಂಬರ್(ಸ) ನಿಂತಿದ್ದ ಸ್ಥಳದ ಮೇಲೆ ಅವಿಶ್ವಾಸಿಗಳು ಉಗ್ರ ದಾಳಿ ನಡೆಸಿದರು. ಒಬ್ಬರ ನಂತರ ಒಬ್ಬರು, ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸುತ್ತಾ ಸಹಾಬಿಯವರು ಕೊಲ್ಲಲ್ಪಟ್ಟರು. ಇದಲ್ಲದೆ, ಕತ್ತಿವರಿಸೆಗಾರರ ಬಿಲ್ಲುಗಾರರು ಎತ್ತರದ ಬೆಟ್ಟಗಳ ಮೇಲೆ ನಿಂತು ಹಝ್ರತ್ ಪೈಗಂಬರ್(ಸ) ಅವರ ಕಡೆಗೆ ಸಾಕಷ್ಟು ಬಾಣಗಳನ್ನು ಹೊಡೆದರು ಮತ್ತು ಶತ್ರುಗಳು ಹಝ್ರತ್ ಪೈಗಂಬರ್(ಸ)ರ ಮುಖದ ಕಡೆಗೆ ಎಲ್ಲಾ ಬಾಣಗಳನ್ನು ಎಸೆಯುತ್ತಿರುವುದನ್ನು ನೋಡಿ ಮಕ್ಕಾದ ಖುರೈಶಿ ಜನಾಂಗಕ್ಕೆ ಸೇರಿದ್ದ ಮತ್ತು ಮುಹಾಜಿರೀನರಲ್ಲಿ ಒಬ್ಬರಾದ ತಲ್ಹಾ(ರ) ರವರು ತಮ್ಮ ಕೈಯನ್ನು ಹಝ್ರತ್ ಪೈಗಂಬರ್(ಸ)ರವರ ಮುಖದ ಮುಂದೆ ಇರಿಸಿದರು. ಗುರಿಯ ಮೇಲೆ ಬಿದ್ದ ಬಾಣದ ಮೇಲೆ ಬಾಣವು ತಲ್ಹಾನ ಕೈಗೆ ಬಿದ್ದಿತು, ಆದರೆ ಆ ಧೈರ್ಯಶಾಲಿ ಹಾಗೂ ನಿಷ್ಠಾವಂತ ಸಹಾಬಿ ತಮ್ಮ ಕೈಯನ್ನು ಕದಲಲಿಲ್ಲ. ಹೀಗೆ ಬಾಣಗಳು ಬೀಳುತ್ತಲೇ ಇದ್ದವು ಮತ್ತು ಗಾಯಗಳ ತೀವ್ರತೆಯಿಂದ ತಲ್ಹಾನ ಕೈ ಸಂಪೂರ್ಣವಾಗಿ ನಿರುಪಯುಕ್ತವಾಯಿತು ಹೀಗೆ ಅವರ ಒಂದು ಕೈ ಮಾತ್ರ ಉಳಿಯಿತು.

ಅನೇಕ ವರ್ಷಗಳ ನಂತರ, ಇಸ್ಲಾಂನ ನಾಲ್ಕನೇ ಖಿಲಾಫತ್ ಕಾಲಾವಧಿಯಲ್ಲಿ, ಮುಸ್ಲಿಮರ ನಡುವೆ ಅಂತರ್ಯುದ್ಧ ಸಂಭವಿಸಿದಾಗ, ಶತ್ರುಗಳು ತಲ್ಹಾ ಅವರನ್ನು ವ್ಯಂಗ್ಯವಾಗಿ 'ಟುಂಡಾ' (ಕೈವಿಹೀನ) ಎಂದು ಕರೆದರು. ಅಂದರೆ ನಿಮ್ಮ ಕೈ ಕೆಲಸ ಮಾಡುತ್ತಿಲ್ಲ. ಇದನ್ನು ಆಲಿಸಿದ ಇನ್ನೊಂದು ಸಹಾಬಿ ಹೇಳಿದರು: ಹೌದು, ಇವರು ಟುಂಡಾ ಆಗಿದ್ದಾರೆ ಆದರೆ ಎಂತಹ ಅನುಗ್ರಹದಾಯಕ ಟುಂಡಾ ಆಗಿದ್ದಾರೆ. ತಲ್ಹಾ(ರ)ರವರ ಈ ಕೈ ಹಝ್ರತ್ ಪೈಗಂಬರ್(ಸ)ರವರ ಮುಖವನ್ನು ರಕ್ಷಿಸುವ ಸಂದರ್ಭದಲ್ಲಿ ಟುಂಡಾ ಆಗಿದೆ ಎಂದು ನಿಮಗೆ ತಿಳಿದಿದೆಯೇ. ಉಹುದ್ ಯುದ್ಧದ ನಂತರ, ಒಬ್ಬ ವ್ಯಕ್ತಿ ತಲ್ಹಾರನ್ನು ಕೇಳಿದನು, ಬಾಣಗಳು ಅವರ ಕೈಗೆ ಬಿದ್ದಾಗ, ನೀವು ನೋವನ್ನು ಅನುಭವಿಸಲಿಲ್ಲವೇ? ಮತ್ತು ನಿಮ್ಮ ಬಾಯಿಯಿಂದ 'ಉಫ್' ಎಂದು ಧ್ವನಿ ಹೊರಡಲಿಲ್ಲವೇ? ಅದಕ್ಕೆ ತಲ್ಹಾ(ರ) ಉತ್ತರಿಸಿದರು. ನೋವು ಕೂಡ ಇತ್ತು ಮತ್ತು ಉಫ್ ಎಂದು ಸಹ ಹೊರಬರಲು ಬಯಸಿತು, ಆದರೆ ನಾನು ಹಾಗೆ ಮಾಡಿದರೆ ನನ್ನ ಕೈ ಚಲಿಸಬಹುದ ಮತ್ತು ಬಾಣವು ಹಝ್ರತ್ ಪೈಗಂಬರ್(ಸ) ಅವರ ಮುಖಕ್ಕೆ ತಾಗಬಹುದು ಎಂದು ಮಾಡಲಿಲ್ಲ. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-250)

ಹಝ್ರತ್ ಸಾದ್ ಬಿನ್ ಅಬಿ ವಕ್ಕಾಸ್(ರ) ಅವರು ಮಹಾನ್ ಶೌರ್ಯ ಮತ್ತು ನಿಷ್ಠೆಯನ್ನು ತೋರಿದ ಶಹೀದ್‌ರಲ್ಲಿ ಒಬ್ಬರಾಗಿದ್ದರು. ಅವರ ಪುತ್ರಿ ಆಯಿಷಾ ಬಿಂತ್ ಸಅದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಅವರು ಹೇಳಿದರು: ಜನರು, ಅಂದರೆ ಶತ್ರುಗಳು ತಿರುಗಿ ದಾಳಿ ಮಾಡಿದಾಗ ನಾನು ಒಂದು ಬದಿಗೆ ಸರಿದು ಹೋದೆ. ನಾನು ಅವರನ್ನು ನನ್ನಿಂದ ತೊರೆದುಹಾಕುತ್ತೇನೆ ಅಥವಾ ನಾನು ಸ್ವತಃ ಮೋಕ್ಷ ಪಡೆಯುತ್ತೇನೆ ಅಥವಾ ಶಹೀದ್ ಆಗುತ್ತೇನೆ ಎಂದು ಹೇಳಿದರು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ನಾನು ಕೆಂಪು ಮುಖದ ವ್ಯಕ್ತಿಯನ್ನು ನೋಡಿದೆ. ಅವಿಶ್ವಾಸಿಗಳು ಅವರನ್ನು ಸದೆಬಡಿಯಲು ಮುಂದಾದರು, ಆದ್ದರಿಂದ ಅವರು ತಮ್ಮ ಕೈಯನ್ನು ಬೆಣಚುಕಲ್ಲುಗಳಿಂದ ತುಂಬಿಸಿ ಹೊಡೆದರು. ಅಷ್ಟರಲ್ಲಿ ಆ ವ್ಯಕ್ತಿ ಹಾಗೂ ನನ್ನ ನಡುವೆ ಮಿಖ್ದಾದ್ ಬಂದರು ಅದಕ್ಕೆ ನಾನು ಅವರಿಗೆ ಕೇಳಲು ಬಯಸಿದೆ ಅಷ್ಟರಲ್ಲಿ ಅವರು ಹೇಳಿದರು ಎಲೈ ಸಾದ್!! ಇವರು ಹಝ್ರತ್ ಪೈಗಂಬರ್(ಸ) ಆಗಿದ್ದಾರೆ ಅವರು ನಿಮ್ಮನ್ನು ಕರೆಯುತ್ತಿದ್ದಾರೆ. ಹಾಗಾಗಿ ನಾನು ಎದ್ದು ನಿಂತಾಗ ನನಗೆ ಯಾವುದೇ ತೊಂದರೆ ಇಲ್ಲ ಎಂದು ಭಾಸವಾಯಿತು. ನಾನು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದಾಗ ಅವರು(ಸ) ನನ್ನನ್ನು ಅವರ ಮುಂದೆ ಕುಳಿತುಕೊಳ್ಳುವಂತೆ ಮಾಡಿದರು. ನಾನು ಬಾಣಗಳನ್ನು ಹೊಡೆಯಲು ಪ್ರಾರಂಭಿಸಿದೆ ಮತ್ತು ನಾನು ಹೇಳುತ್ತಿದ್ದೆ: ಓ ಅಲ್ಲಾಹನೇ! ನಿನ್ನ ಬಳಿ ಬಾಣವಿದೆ, ಅದರ ಮೂಲಕ ನಿನ್ನ ಶತ್ರುವನ್ನು ನೀನು ಕೊಲ್ಲಬೇಕು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು: ಓ ಅಲ್ಲಾಹನೇ! ಸಾದ್ ಅವರ ಈ ಪ್ರಾರ್ಥನೆಯನ್ನು ಸ್ವೀಕರಿಸು. ಓ ಅಲ್ಲಾಹನೇ! ಸಾದ್ ಅವರ ಗುರಿಯನ್ನು ಸರಿಪಡಿಸಿ. ಓ ಸಾದ್! ನಿನ್ನ ಮೇಲೆ ನನ್ನ ತಂದೆತಾಯಂದಿರು ಅರ್ಪಿತವಾಗಲಿ. ಸಾದ್ ಹೇಳುತ್ತಾರೆ: ನಾನು ಹೀಗೆ ಮಾಡುತ್ತಿದ್ದೆ ಆದರೆ ಆ ಸಮಯದಲ್ಲಿ ದೃಶ್ಯ ಹೇಗಿತ್ತು ಎಂದರೆ ನಮ್ಮ ನಡುವೆ ದೇವದೂತ ಬಂದಿದ್ದಾನೆ ಮತ್ತು ಅವನು ಕೂಡ ಒಟ್ಟಿಗೆ ಹೋರಾಡುತ್ತಿದ್ದನು ಎಂದು ಭಾವಿಸಿದೆ ಆದರೆ ಆ ಸಮಯದಲ್ಲಿ ನನಗೆ ಯಾರೋ ಹೇಳಿದರು. ಹಝ್ರತ್ ಪೈಗಂಬರ್(ಸ) ಅವರಾಗಿದ್ದರು. ಇದರಿಂದ ತಿಳಿಯುದೇನೆಂದರೆ ಜನರಲ್ಲಿ ಆವಿಷ್ಕಾರದ ವಿಭಿನ್ನ ಪರಿಸ್ಥಿತಿಗಳು ಇದ್ದರಿಬಹುದು ಅಥವಾ ಅದು ವಾಸ್ತವವಾಗಿಯೂ ಇದ್ದಿರಬಹುದು. ಆದಾಗ್ಯೂ, ಕೊನೆಯಲ್ಲಿ ಇವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದರು. ಸಾದ್(ರ) ಹೇಳುತ್ತಾರೆ: ನಾನು ಯಾವ ಬಾಣವನ್ನು ಹೊಡೆದರೂ ಹಝ್ರತ್ ಪೈಗಂಬರ್(ಸ) ಅದರೊಂದಿಗೆ ಹೀಗೆ ಹೇಳುತ್ತಿದ್ದರು: ಓ ಅಲ್ಲಾಹನೇ! ಅವನ ಗುರಿಯನ್ನು ಸರಿಪಡಿಸು ಮತ್ತು ಅವನ ಪ್ರಾರ್ಥನೆಯನ್ನು ಸ್ವೀಕರಿಸು. ನಾನು ನನ್ನ ಬತ್ತಳಿಕೆಯ ಬಾಣಗಳನ್ನು ಹೊಡೆದು ಮುಗಿಸಿದಾಗಲೂ ಹಝ್ರತ್ ಪೈಗಂಬರ್(ಸ)ರು ತಮ್ಮ ಬತ್ತಳಿಕೆಯನ್ನು ಹರಡಿದರು. ಮತ್ತು ಒಮ್ಮೆ ನನಗೆ ಗರಿಯಿಲ್ಲದ ಬಾಣವನ್ನು ನೀಡಿದರು ಮತ್ತು ಅದು ಇತರ ಬಾಣಗಳಿಗಿಂತ ಬಹಳ ತೀಕ್ಷ್ಣವಾಗಿತ್ತು.

ಅಂದು ಸಾದ್ ಒಂದು ಸಾವಿರ ಬಾಣಗಳನ್ನು ಹೊಡೆದರು ಎಂದು ಅಲ್ಲಮ ಝುಹ್ರಿ ಬರೆದಿದ್ದಾರೆ. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ 4, ಪುಟಗಳು 200-201, ದಾರುಲ್ ಕುತುಬ್ ಇಲ್ಮಿಯ)

ಉಹುದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ)ರೊಂದಿಗೆ ಕೆಲವು ಸ್ಥಿರ ಸಹಾಬಿಯವರು ಉಳಿದಿದ್ದಾಗ, ಹಝ್ರತ್ ಸಾದ್ ಬಿನ್ ಅಬೀ ವಖಾಸ್(ರ)ರವರ ಬಗ್ಗೆ ಸೀರತ್ ಖಾತಮ್ಮನಬೀಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಬರೆದಿದ್ದಾರೆ. ಹಝ್ರತ್ ಸಅದ್ ಬಿನ್ ವಖಾಸ್(ರ)ರಿಗೆ ಹಝ್ರತ್ ಪೈಗಂಬರ್(ಸ) ಸ್ವತಃ ಬಾಣಗಳನ್ನು ಕೊಡುತ್ತಿದ್ದರು ಮತ್ತು ಹಝ್ರತ್ ಸಅದ್(ರ) ಶತ್ರುಗಳ ಮೇಲೆ ನಿರಂತರವಾಗಿ ಅವುಗಳನ್ನು ಚಲಾಯಿಸುತ್ತಿದ್ದರು. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್(ರ)ರೊಡನೆ ಹೀಗೆ ಹೇಳಿದರು: ನಿನ್ನ ಮೇಲೆ ನನ್ನ ತಂದೆತಾಯಂದಿರು ಅರ್ಪಿತವಾಗಲಿ. ನೀನು ನಿರಂತರವಾಗಿ ಬಾಣಗಳನ್ನು ಚಲಾಯಿಸುತ್ತಾ ಇರು. ಹಝ್ರತ್ ಸಅದ್(ರ) ತನ್ನ ಮರಣದ ವರೆಗೆ ಈ ವಾಕ್ಯವನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

(ಸೀರತ್ ಖಾತಮನ್ನಬೀಯೀನ್(ಸ), ಸಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ (ರ), ಪುಟ-495)

ಮತ್ತೊಂದು ವರದಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ವರದಿ ಹೇಳುತ್ತಾರೆ: ಉಹುದ್ ದಿನದಂದು ಹಝ್ರತ್ ಪೈಗಂಬರ್(ಸ) ತಮ್ಮ ಬತ್ತಳಿಕೆಯಿಂದ ಬಾಣಗಳನ್ನು ನನಗಾಗಿ ನೀಡಿ ಹೇಳಿದರು ನೀವು ನಿರಂತರವಾಗಿ ಬಾಣಗಳನ್ನು ಚಲಾಯಿಸಿ ನಿಮ್ಮ ಮೇಲರ ನನ್ನ ತಂದೆ ತಾಯಂದಿರು ಅರ್ಪಿತವಾಗಲಿ. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಝಾಝಿ, ಹದೀಸ್-4055)

ಹಝ್ರತ್ ಅಲಿ(ರ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ) ಹೊರತುಪಡಿಸಿ ಯಾರಿಗಾಗಿಯೂ ತನ್ನ ತಂದೆತಾಯಂದಿರು ಅರ್ಪಿತವಾಗುವಂತೆ ದುವಾ ಮಾಡುವುದನ್ನು ನಾನು ಕೇಳಲಿಲ್ಲ. ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಸಅದ್(ರ.ಅ) ರವರಿಗೆ ನನ್ನ ತಂದೆ ತಾಯಂದಿರು ನಿನಗಾಗಿ ಅರ್ಪಿತವಾಗಲಿ ಬಾಣಗಳನ್ನು ಚಲಾಯಿಸಿರಿ ಎಂದು ಹೇಳಿದರು. ಓ ಬಲಿಷ್ಠ ಯುವಕನೇ, ನೀನು ನಿನ್ನ ಬಾಣಗಳನ್ನು ಚಲಾಯಿಸು. (ಅಲ್-ತಿರ್ಮಿದಿ, ಕಿತಾಬ್ ಅಲ್-ಮನಾಕಿಬ್, ಹದೀಸ್-3753)

ಆದರೆ ಬುಖಾರಿಯಲ್ಲಿ ಮತ್ತೊಂದು ವರದಿ ಇದೆ, ಹಝ್ರತ್ ಸಅದ್(ರ) ರವರ ಜೊತೆಗೆ, ಹಝ್ರತ್ ಝುಬೈರ್ ಬಿನ್ ಅವಾಮ್(ರ) ರ ಹೆಸರೂ ಇತಿಹಾಸದಲ್ಲಿ ಕಂಡುಬರುತ್ತದೆ, ಅವರಿಗೆ ಹಝ್ರತ್ ಪೈಗಂಬರ್(ಸ) ಹೇಳಿದರು, **ಫಿದಾಕ ಅಬೀ ವ ಉಮ್ಮೀ** ಅಂದರೆ: ನನ್ನ ತಂದೆ ತಾಯಂದಿರು ನಿಮ್ಮ ಮೇಲೆ ಅರ್ಪಿತವಾಗಲಿ.

(ಸಹೀಹ್ ಬುಖಾರಿ, ಕಿತಾಬ್ ಫಝಾಎಲುನ್ನಬೀ(ಸ), ಮನಾಖಿಬ್ ಅಝ್ಝುಬೈರ್ ಬಿನುಲ್ ಅವಾಮ್(ರ), ಹದೀಸ್ ಸಂಖ್ಯೆ-3720)

ಅಂತೆಯೇ, ಹಝ್ರತ್ ಅಬು ದುಜಾನಾ(ರ) ಅವರ ತ್ಯಾಗವನ್ನು ಸಹ ಉಲ್ಲೇಖಿಸಲಾಗಿದೆ. ಹಝ್ರತ್ ಅಬು ದುಜಾನಾ(ರ) ಅವರು ಉಹುದ್ ಯುದ್ಧದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಗುರಾಣಿಯಾಗಿ ರಕ್ಷಿಸುತ್ತಿದ್ದರು ಎಂಬ ವರದಿ ಇದೆ. ಹೀಗೆ ಅವರು ಹಝ್ರತ್ ಪೈಗಂಬರ್(ಸ) ಅವರ ಕಡೆ ಮುಖ ಮಾಡಿ ನಿಂತರು. ಯಾವುದೇ ಬಾಣವು ಬಂದರೆ ಅದು ಹಝ್ರತ್ ಅಬು ದುಜಾನಾ ಅವರ ಬೆನ್ನಿಗೆ ಹೊಡೆಯುತ್ತಿತ್ತು. ಅವರು ಬಾಗಿ ನಿಂತು ಎಲ್ಲಾ ಬಾಣಗಳನ್ನು ತಮ್ಮ ಬೆನ್ನಿನ ಮೇಲೆ ತೆಗೆದುಕೊಳ್ಳುತ್ತಿದ್ದರು. ಅವರ ಬೆನ್ನಿಗೆ ಅಸಂಖ್ಯಾತ ಬಾಣಗಳು ಕೂಡ ಅಂಟಿಕೊಂಡಿದ್ದವು. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-314, ದಾರುಲ್ ಕುತುಬ್ ಇಲ್ಮಿಯಾ, ಬೈರುತ್, 2008)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಹಝ್ರತ್ ಅಬು ದುಜಾನ(ರ) ಅವರ ದೃಢತೆಯ ಬಗ್ಗೆ ಬರೆದಿದ್ದಾರೆ: "ಅಬೂದುಜಾನ(ರ) ಬಹಳ ದೀರ್ಘ ಸಮಯದ ವರೆಗೆ ಹಝ್ರತ್ ಪೈಗಂಬರ್(ರ)ರ ಶರೀರವನ್ನು ತನ್ನ ದೇಹದಿಂದ ಅಡಗಿಸಿದರು. ಮುಂದಿನಿಂದ ಬರುತ್ತಿದ್ದ ಬಾಣಗಳು ಮತ್ತು ಕಲ್ಲುಗಳನ್ನು ತನ್ನ ದೇಹದಿಂದ ತಡೆಯುತ್ತಿದ್ದರು. ಎಲ್ಲಿಯ ವರೆಗೆ ಎಂದರೆ ಅವರ ದೇಹವು ಬಾಣಗಳಿಂದ ಛಿದ್ರವಾಯಿತು. ಆದರೆ ಅವರು 'ಊಫ್' ಎಂದು ಸಹ ಹೇಳಲಿಲ್ಲ ಏಕೆಂದರೆ ಹೀಗೆ ಮಾಡುವುದರಿಂದ ಅವರ ದೇಹದಲ್ಲಿನ ಚಲನೆಯಿಂದ ಹಝ್ರತ್ ಪೈಗಂಬರ್(ಸ) ಅವರ ಶರೀರದ ಯಾವುದೇ ಭಾಗವು ಬಹಿರಂಗವಾದರೆ ಬಾಣವು ಅವರಿಗೆ ತಾಗಬಹುದು ಎಂದು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-495)

ನಂತರ ಹಝ್ರತ್ ಸಹಲ್ ಬಿನ್ ಹುನೈಫ್(ರ) ಸಹ ಶ್ರೇಷ್ಠ ಸಹಾಬಿಯಾಗಿದ್ದರು. ಅವರು ಉಹುದ್‌ನ ದಿನ ಸ್ಥಿರಚಿತ್ತತೆ ತೋರಿಸಿದರು. ಅವರು ಅಂದು ಸಾಯಲು ತಯಾರಾಗಿದ್ದೇವೆ ಎಂಬುದಾಗಿ ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಪ್ರತಿಜ್ಞೆ ಮಾಡಿದವರಾಗಿದ್ದರು. ಅವರು ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರ ಮುಂದೆ ಗುರಾಣಿಯಂತೆ ಅಚಂಚಲರಾಗಿ ನಿಂತರು. ಶತ್ರುಗಳ ಘೋರ ದಾಳಿಯಿಂದ ಮುಸಲ್ಮಾನರು ಚದುರಿಹೋದಾಗ ಅಂದು ಹಝ್ರತ್ ಪೈಗಂಬರ್(ಸ) ಅವರ ಪರವಾಗಿ ಬಾಣಗಳನ್ನು ಪ್ರಯೋಗಿಸಿದರು. ಹಝ್ರತ್ ಪೈಗಂಬರ್(ಸ)ರವರು ಹೇಳಿದರು, ಸಹ್ಲ್ ಅವರಿಗೆ ಬಾಣಗಳನ್ನು ನೀಡಿರಿ, ಏಕೆಂದರೆ ಬಾಣವನ್ನು ಹೊಡೆಯುವುದು ಅವರಿಗೆ ಸುಲಭದ ವಿಷಯವಾಗಿದೆ. (ಅಲ್-ಇಸ್ತಿಯಾಬ್, ಸಂಪುಟ 2, ಪುಟಗಳು 662-663, ದಾರುಲ್-ಜೀಲ್ ಬೈರುತ್ 1992)

ನಂತರ ಉಹುದ್ ಕದನದಲ್ಲಿ ಶೌರ್ಯದ ಸಾರವನ್ನು ತೋರಿಸಿದ ಮಹಿಳಾ ಸಹಾಬಿ, ಹಝ್ರತ್ ಉಮ್ಮೆ ಉಮಾರಾ(ರ) ಅವರ ಉಲ್ಲೇಖವಿದೆ ಮತ್ತು ಅವರು ಶೌರ್ಯದ ಸಾರವನ್ನು ತೋರಿಸಿದ ಅತ್ಯಂತ ನಿಷ್ಠಾವಂತ ಸಹಾಬಿಯಾ ಆಗಿದ್ದರು. ಅವರ ಪೂರ್ಣ ಹೆಸರು ಉಮ್ಮೆ ಉಮಾರಾ, ಅಮರಾ ಮಝಿನಿಯಾ ಎಂದಾಗಿತ್ತು. ಹಝ್ರತ್ ಉಮ್ಮೆ ಉಮಾರಾ(ರ) ಅವರ ಹೆಸರು ನುಸೈಬಾ ಎಂದಾಗಿತ್ತು. ನುಸೈಬಾ ಎಂಬುದು ಅವರ ನಿಜವಾದ ಹೆಸರಾಗಿತ್ತು. ಇವರು ಹಝ್ರತ್ ಝೈದ್ ಬಿನ್ ಆಸಿಮ್ ಅವರ ಪತ್ನಿಯಾಗಿದ್ದರು. ಹಝ್ರತ್ ಉಮ್ಮೆ ಉಮಾರಾ(ರ) ಸ್ವತಃ ಹೇಳುತ್ತಾರೆ: ಉಹುದ್ ಕದನದ ಸಂದರ್ಭದಲ್ಲಿ ಜನರು ಏನು ಮಾಡುತ್ತಿದ್ದಾರೆಂದು ನೋಡಲು ನಾನು ಹೊರಟೆ. ನನ್ನ ಬಳಿ ಗಾಯಾಳಿಗಳನ್ನು ನಿಡು ಕುಡಿಸಲು ನೀರು ತುಂಬಿದ ಮಶ್ಕೀಜಾ ಕೂಡ ಇತ್ತು ಅದನ್ನು ತೆಗೆದು ಕೊಂಡು ನಾನು ಹಝ್ರತ್ ಪೈಗಂಬರ್(ಸ) ಅವರ ಬಳಿ ತಲುಪಿದೆ. ಆ ಸಮಯದಲ್ಲಿ ನೀವು(ಸ) ಸಹಾಬಾಗಳ ನಡುವೆ ಇದ್ದರು ಮತ್ತು ಆ ಸಮಯದಲ್ಲಿ ಮುಸ್ಲಿಮರ ಭಾಗವು ಭಾರವಾಗಿತ್ತು, ಅಂದರೆ ಯುದ್ಧದ ಪ್ರಾರಂಭದ ಸಮಯವಾಗಿತ್ತು. ನಂತರ ಇದ್ದಕ್ಕಿದ್ದಂತೆ ಸಹಾಬರವರಲ್ಲಿ ಗೊಂದಲ ಸೃಷ್ಠಿಯಾಯಿತು ಮತ್ತು ಎಲ್ಲರು ಛದ್ರಿಯಾದರು. ಪರ್ವತದ ಶಹದಾರಿಯನ್ನು (ಕಣಿವೆ) ತೊರೆದ ಘಟನೆ ನಡೆಯಿತು ಮತ್ತು ಮುಶ್ರಿಕೀನರು ಹಿಂಬದಿಯಿಂದ ಮುಸ್ಲಿಮರ ಮೇಲೆ ದಾಳಿ ನಡೆಸಿದರು. ಅವರು ಹೇಳುತ್ತಾರೆ: ಇತ್ತ ಕಡೆ ಮುಶ್ರಿಕೀನರು ಹಝ್ರತ್ ಪೈಗಂಬರ್(ಸ)ರ ಮೇಲೆ ಎಲ್ಲಾ ಕಡೆಯಿಂದ ದಾಳಿ ಮಾಡಿದರು. ಈ ಪರಿಸ್ಥಿತಿ ನೋಡಿ ನಾನು ಎದ್ದು ನಿಂತು ಹೋರಾಡಲು ಆರಂಭಿಸಿದೆ. ಶತ್ರುಗಳು ಕತ್ತಿಯೊಂದಿಗೆ ಅವರ(ಸ) ಹತ್ತಿರ ಬರದಂತೆ ತಡೆಯುತ್ತಿದ್ದೆ. ಅದೇ ಸಮಯದಲ್ಲಿ, ನಾನು ಗಾಯಗೊಳ್ಳುವವರೆಗೂ ಬಾಣಗಳನ್ನು ಚಲಾಯಿಸುತ್ತಿದ್ದೆ. ಅವರ ಭುಜದ ಮೇಲೆ ಒಂದು ಆಳವಾದ ಗಾಯವಾಯಿತು. ನಿಮ್ಮನ್ನು ಯಾರು ಗಾಯಗೊಳಿಸಿದರು ಎಂದು ಅವರನ್ನು ಕೇಳಿದಾಗ ಅವರು ಹೇಳಿದರು: ಇಬ್ನ್ ಕಮಿಯಾ. ಹಝ್ರತ್ ಉಮ್ಮೆ ಉಮಾರಾ(ರ) ಹೇಳುತ್ತಾರೆ, ಮುಸ್ಲಿಮರು ಹಠಾತ್ತನೆ ಹಝ್ರತ್ ಪೈಗಂಬರ್(ಸ) ಅವರ ಸಮ್ಮುಖದಿಂದ ಚದುರಿಹೋದಾಗ, ಅವನು (ಇಬ್ನೆ ಕಮಿಯಾ) ಮುಂದೆ ಹೋಗಿ ನನಗೆ ಮುಹಮ್ಮದ್(ಸ) ಯಾರು ತೋರಿಸಿ. ಏಕೆಂದರೆ ಅವರು ಇಂದು ರಕ್ಷಿಸಲ್ಪಟ್ಟರೆ, ನಾನು ಉಳಿಯುವುದಿಲ್ಲ ಎಂದು ಹೇಳುತ್ತಿದ್ದನು. ಅಂದರೆ ಒಂದೋ ಅವರು ಇಂದು ಉಳಿಯುತ್ತಾರೆ ಅಥವಾ ನಾನು ಉಳಿಯುತ್ತೇನೆ. ಅವನು (ಇಬ್ನೆ ಕಮಿಯಾ) ಹತ್ತಿರ ಬಂದಾಗ, ನಾನು ಮತ್ತು ಮುಸ್‌ಅಬ್ ಬಿನ್ ಉಮೈರ್(ರ) ಅವನ ದಾರಿಯನ್ನು ತಡೆದಿದ್ದೇವೆ ಎಂದು ಅವರು ಹೇಳುತ್ತಾರೆ. ಆ ಸಂದರ್ಭದಲ್ಲಿ ಅವನು ನನ್ನ ಮೇಲೆ ಹಲ್ಲೆ ನಡೆಸಿದನು. ದಾಳಿ ಮಾಡಿ ಈ ಗಾಯವನ್ನು ಉಂಟುಮಾಡಿದನು. ನೀವು ಕೇಳುತ್ತಿರುವ ಭುಜದ ಗಾಯವು ಅವನು ನನಗೆ ಉಂಟುಮಾಡಿದನು. ನಾನು ಅವನನ್ನು ಅನೇಕ ಬಾರಿ ಹೊಡೆದಿದ್ದೇನೆ, ಆದರೆ ಆ ಅಲ್ಲಾಹನ ವೈರಿ ಎರಡು ರಕ್ಷಾಕವಚಗಳನ್ನು ಧರಿಸಿದ್ದನು. ಕೆಲವು ವಿದ್ವಾಂಸರು ಬರೆದಿದ್ದಾರೆ: ಉಹುದ್ ಯುದ್ಧದ ಸಂದರ್ಭದಲ್ಲಿ, ನುಸೈಬಾ, ಅವರ ಪತಿ ಹಝ್ರತ್ ಝೈದ್ ಬಿನ್ ಆಸಿಮ್ ಮತ್ತು ಅವರ ಇಬ್ಬರು ಮಕ್ಕಳಾದ ಖುಬೈಬ್ ಮತ್ತು ಅಬ್ದುಲ್ಲಾ ಎಲ್ಲರೂ ಯುದ್ಧಕ್ಕೆ ಹೋಗಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ರವರು ಅವರಿಗೆಲ್ಲರಿಗೂ ಹೇಳಿದ್ದರು ಸರ್ವಶಕ್ತನಾದ ಅಲ್ಲಾಹನು ನಿಮ್ಮ ಇಡೀ ಕುಟುಂಬಕ್ಕೆ ಅನುಗ್ರಹವನ್ನು ನೀಡಲಿ ಎಂದು. ಒಂದು ವರದಿಯ ಪ್ರಕಾರ ಸರ್ವಶಕ್ತನಾದ ಅಲ್ಲಾಹನು ನಿಮ್ಮ ಕುಟುಂಬವನ್ನು ಅನುಗ್ರಹಿಸಲಿ ಎಂದು ಹೇಳಿದ್ದರು ಎಂದೂ ಇದೆ. ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಮಾಡಿದ ಪ್ರಾರ್ಥನೆಯ ನಂತರ, ಹಝ್ರತ್ ಉಮ್ಮೆ ಉಮಾರಾ(ರ) ಅಂದರೆ ನುಸೈಬಾ, ಹಝ್ರತ್ ಪೈಗಂಬರ್(ಸ) ಅವರಲ್ಲಿ: ನಾವು ನಿಮ್ಮೊಂದಿಗೆ ಸ್ವರ್ಗದಲ್ಲಿರಲು ಪರಮಾತ್ಮನಾದ ಅಲ್ಲಾಹನಲ್ಲಿ ನಮಗಾಗಿ ಪ್ರಾರ್ಥಿಸುವಂತೆ ಕೇಳಿಕೊಂಡರು. ಅದಕ್ಕೆ ಹಝ್ರತ್ ಪೈಗಂಬರ್(ಸ) ದುಆ ಮಾಡುತ್ತಾ ಹೇಳಿದರು: ಓ ಸರ್ವಶಕ್ತನಾದ ಅಲ್ಲಾಹನೇ! ಇವರೆಲ್ಲರನ್ನು ಸ್ವರ್ಗದಲ್ಲಿ ನನ್ನ ಸ್ನೇಹಿತ ಮತ್ತು ಸಂಗಡಿಗರನ್ನಾಗಿ ಮಾಡು. ಅದೇ ಸಮಯದಲ್ಲಿ ಹಝ್ರತ್ ಉಮ್ಮೆ ಉಮಾರಾ(ರ) ಹೇಳಿದರು: ಈಗ ಜಗತ್ತಿನಲ್ಲಿ ನನಗೆ ಏನಾಗುತ್ತದೆ ಎಂಬುದರ ಬಗ್ಗೆ ನಾನು ಯೋಚಿಸುವುದಿಲ್ಲ. ಇಂತಹ ದುಆ ನನಗೆ ಲಭಿಸಿದೆ ಅದೇ ನನಗೆ ಸಾಕು.

ಹಝ್ರತ್ ಪೈಗಂಬರ್(ಸ) ಅವರ ಬಗ್ಗೆ ಹೀಗೆ ಹೇಳಿದರು: ಉಹುದಿನ ದಿನದಂದು ನನ್ನ ಬಲಗಡೆ, ಎಡಗಡೆ ಎಲ್ಲಿ ನೋಡಿದರೂ ನಾನು ಅವರನ್ನು ಕಾಣುತ್ತಿದ್ದೆ. ಅವರು ನನ್ನ ಸಂರಕ್ಷಣೆಗಾಗಿ ಶತ್ರುಗಳೊಡನೆ ಹೋರಾಡುತ್ತಿದ್ದರು. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ 313-314, ದಾರುಲ್ ಕುತುಬ್ ಇಲ್ಮಿಯಾ 2008)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಹಝ್ರತ್ ಉಮ್ಮ ಉಮಾರಾ(ರ) ಅವರ ಬಗ್ಗೆ ಈ ಕೆಳಗಿನಂತೆ ಬರೆದಿದ್ದಾರೆ: "ಉಮ್ಮು ಉಮಾರಾ ಎಂಬ ಹೆಸರಿನ ಮುಸ್ಲಿಂ ಮಹಿಳೆ ತನ್ನ ಕೈಯಲ್ಲಿ ಕತ್ತಿಯೊಂದಿಗೆ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದರು. ಆ ಸಮಯದಲ್ಲಿ ಅಬ್ದುಲ್ಲಾ ಬಿನ್ ಕಮಿಯ್ಯ ಹಝ್ರತ್ ಪೈಗಂಬರ್(ಸ) ಅವರ ಮೇಲೆ ದಾಳಿ ಮಾಡಲು ಮುಂದಾದನು. ಆ ಮುಸ್ಲಿಮ್ ಮಹಿಳೆ ಮುಂದೆ ಧಾವಿಸಿ ತನ್ನ ಮೇಲೆ ಆ ಹೊಡೆತವನ್ನು ತೆಗೆದುಕೊಂಡಳು ಮತ್ತು ನಂತರ ತನ್ನ ಕತ್ತಿಯನ್ನು ಎತ್ತಿ ಅವನನ್ನು ಹೊಡೆದಳು, ಆದರೆ ಅವನು ಎರಡು ರಕ್ಷಾಕವಚಗಳನ್ನು ಧರಿಸಿದ್ದ ಪುರುಷನಾಗಿದ್ದನು ಆದರೆ ಅವರು ಓರ್ವ ದುರ್ಬಲ ಮಹಿಳೆಯಾಗಿದ್ದರು. ಮತ್ತು ಇಬ್ನ್ ಕಮಿಯಾ ಅವನು ಮುಂದೆ ಧಾವಿಸಿದು, ಮುಸ್ಲಿಮರ ಪಂಕ್ತಿಗಳನ್ನು ಕತ್ತರಿಸುತ್ತ ಮುಂದೆ ಸಾಗಿದನು ಮತ್ತು ಸಹಾಬರವರನ್ನು ತಡೆಯುತ್ತಾ ಅವನು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ತಲುಪಿದನು ಮತ್ತು ಅವನು ತಲುಪಿದ ತಕ್ಷಣ, ಹಝ್ರತ್ ಪೈಗಂಬರ್(ಸ) ಅವರ ಮುಖಕ್ಕೆ ಎಷ್ಟು ಶಕ್ತಿಯುತ ಮತ್ತು ಕ್ರೌರ್ಯದಿಂದ ಹೊಡೆದನು ಎಂದರೆ ಸಹಾಬಿಯರ ಹೃದಯಗಳು ನಡುಗಿ ಹೋಯಿತು. ಹಝ್ರತ್ ತಲ್ಹಾ(ರ)ರವರು ತಕ್ಷಣ ಧಾವಿಸಿ ಆ ಹೊಡೆತವು ತಮ್ಮ ಬರಿಗೈಯಲ್ಲಿ ತೆಗೆದುಕೊಂಡರು ಆದರೆ ಇಬ್ನೆ ಕಮಿಯಾವಿನ ಕತ್ತಿಯು ಅವರ (ತಲ್ಹಾ(ರ)) ಕೈಯನ್ನು ಕತ್ತರಿಸುತ್ತ ಹಝ್ರತ್ ಪೈಗಂಬರ್(ಸ) ಅವರ ಬದಿಯಲ್ಲಿ ಬಿದ್ದಿತು. ಅಲ್ಲಾಹನ ಅನುಗ್ರಹದಿಂದ ಗಾಯವಂತು ಆಗಲಿಲ್ಲ ಏಕೆಂದರೆ ಹಝ್ರತ್ ಪೈಗಂಬರ್(ಸ) ಅವರು ಎರಡು ರಕ್ಷಾ ಕವಚಗಳನ್ನು ಧರಿಸಿದ್ದರು. ಮತ್ತು ಹೊಡೆತದ ಬಲವು ತಲ್ಹಾ ಅವರ ಜೀವಾರ್ಪಣೆಯಿಂದ ಕಡಿಮೆಯಾಗಿದೆ. ಆದರೆ ಆ ದುಃಖದಿಂದ ಹಝ್ರತ್ ಪೈಗಂಬರ್(ಸ) ಅವರು ಮೂರ್ಛೆ ಹೋದರು ಅದನ್ನು ಕಂಡು ಇಬ್ನೆ ಕಮಿಯ್ಯ ಹಝ್ರತ್ ಪೈಗಂಬರ್(ಸ) ರನ್ನು ವಧಿಸಿದ್ದೇನೆ

ಎಂದು ಸಂತೋಷದ ಘೋಷಣೆಯೊಂದಿಗೆ ಹಿಮ್ಮೆಟ್ಟಿದನು ಮತ್ತು ಅವನು ನಾನು ಪ್ರವಾದಿ(ಸ) ರನ್ನು ಕೊಂದಿದ್ದೇನೆ ಎಂದು ಭಾವಿಸಿದನು. ಆದರೆ ಹಝ್ರತ್ ಪೈಗಂಬರ್(ಸ) ಕೆಳಗೆ ಬಿದ್ದ ತಕ್ಷಣ ಹಝ್ರತ್ ಅಲೀ(ರ) ಮತ್ತು ತಲ್ಹಾ(ರ) ರವರು ಹಝ್ರತ್ ಪೈಗಂಬರ್(ಸ) ಅವರನ್ನು ಮೇಲಕ್ಕೆತ್ತಿದರು. ಹೀಗೆ ಮುಸ್ಲಿಮರ ಸತ್ತ ಮುಖಗಳು ಹಝ್ರತ್ ಪೈಗಂಬರ್(ಸ) ಅವರು ಜೀವಂತವಾಗಿದ್ದಾರೆ ಮತ್ತು ಚೆನ್ನಾಗಿದ್ದಾರೆ ಎಂದು ತಿಳಿದ ನಂತರ ಸಂತೋಷದಿಂದ ಮರುಜೀವಿತವಾಯಿತು. ಈಗ ಕ್ರಮೇಣ ಕದನದ ತೀವ್ರತೆಯೂ ಕಡಿಮೆಯಾಗತೊಡಗಿತು ಏಕೆಂದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಹುತಾತ್ಮರಾಗಿದ್ದಾರೆ ಎಂದು ತೃಪ್ತಿಯಿಂದ ಕೆಲವು ಮುಶ್ರಿಕೀನರು ಸ್ವಲ್ಪ ನಿರಾಳರಾಗಿದ್ದರು. ಆದ್ದರಿಂದ ಅವರು ಯುದ್ಧದಿಂದ ತಮ್ಮ ಗಮನವನ್ನು ಬೇರೆಡೆಗೆ ತಿರುಗಿಸಿದರು ಮತ್ತು ಕೆಲವರು ಕೊಲ್ಲಲ್ಪಟ್ಟವರ ಕಡೆಗೆ ಗಮನಹರಿಸಿದರು ಮತ್ತು ಕೆಲವು ಮುಸ್ಲಿಮರ ಮೃತದೇಹಗಳನ್ನು ಅಪವಿತ್ರಗೊಳಿಸುವತ್ತ ಮುಖಮಾಡಿದ್ದರು ಮತ್ತು ಮತ್ತೊಂದೆಡೆ ಮುಸ್ಲಿಮರೂ ಆಗಾಗ್ಗೆ ಚದುರಿ ಹೋಗಿದ್ದರು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-496-497)

ಯುದ್ಧದ ಘಟನೆಗಳಲ್ಲಿ ಅಬೂಸುಫ್‌ಯಾನ್‌ರೊಂದಿಗೆ ಮಾತುಕತೆ ಮತ್ತು ಖುರೈಶಿಗಳು ಹೇಗೆ ಮರಳಿ ಹೋದರು ಎಂಬುದರ ಪ್ರಸ್ತಾಪ ಬರುತ್ತದೆ. ಉಹುದ್ ಕದನದ ದಿನದಂದು ಹಝ್ರತ್ ಪೈಗಂಬರ್(ಸ) ಸಹಾಬಿಗಳೊಂದಿಗೆ ಪರ್ವತವನ್ನು ಏರಿದಾಗ, ಅವಿಶ್ವಾಸಿಗಳು ಅವರನ್ನು ಹಿಂಬಾಲಿಸಿದರು. ಸಹೀಹ್ ಬುಖಾರಿಯ ಒಂದು ವರದಿ ಹೀಗಿದೆ: ಅಬೂಸುಫ್ಯಾನ್ ಮೂರು ಬಾರಿ ಕರೆದು ಹೇಳಿದನು: ಈ ಜನರಲ್ಲಿ ಮುಹಮ್ಮದ್(ಸ) ಇದ್ದಾರೆಯೇ? ಹಝ್ರತ್ ಪೈಗಂಬರ್(ಸ) ಅದಕ್ಕೆ ಉತ್ತರ ನೀಡದಂತೆ ಸಹಾಬಿಗಳನ್ನು ತಡೆದರು. ನಂತರ ಅವನು ಮೂರು ಬಾರಿ ಅದೇ ರೀತಿ ಕರೆದು ಕೇಳಿದನು: ಜನರಲ್ಲಿ ಅಬು ಕಹಾಫಾ ಅವರ ಮಗ ಅಬೂಬಕರ್ ಇದ್ದಾರೆಯೇ? ನಂತರ ಅವನು ಮೂರು ಬಾರಿ ಕೇಳಿದನು: ಈ ಜನರಲ್ಲಿ ಇಬ್ನ್ ಅಲ್-ಖತ್ತಾಬ್ ಅಂದರೆ ಉಮರ್ ಇದ್ದಾರೆಯೇ? ನಂತರ ಅವನು ತನ್ನ ಸಹಚರರ ಬಳಿಗೆ ಹಿಂದಿರುಗಿ ಅಲ್ಲಿದ್ದವರು ಕೊಲ್ಲಲ್ಪಟ್ಟಿದ್ದಾರೆ ಎಂದು ಹೇಳಿದನು. ಇದನ್ನು ಕೇಳಿದ ಹಝ್ರತ್ ಉಮರ್(ರ) ತಮ್ಮನ್ನು ನಿಯಂತ್ರಿಸಲು ಸಾಧ್ಯವಾಗದೆ ಅವರು ಅವನಿಗೆ ಕೂಗಿ ಹೇಳಿದರು ಎಲೈ ಅಲ್ಲಾಹನ ಶತ್ರು! ಅಲ್ಲಾಹನ ಆಣೆ! ನೀನು ಸುಳ್ಳು ಹೇಳಿದೆ. ನೀನು ಹೆಸರಿಸಿದವರೆಲ್ಲರೂ ಜೀವಂತವಾಗಿದ್ದಾರೆ. ನಿನಗೆ ಅಹಿತಕರವಾದವುಗಳಲ್ಲಿ ಇನ್ನೂ ಬಹಳಷ್ಟು ಉಳಿದಿದೆ. ಇದು ಬುಖಾರಿಯ ಸಂಪ್ರದಾಯವೂ ಹೌದು.

(ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಜಿಹಾದ್ ವಾಲ್-ಸೈರ್)

ಈ ಯುದ್ಧವು ಬದ್ರ್ ಯುದ್ಧದ ಪ್ರತೀಕಾರವಾಗಿದೆ ಎಂದು ಅಬೂಸುಫ್ಯಾನ್ ಹೇಳಿದನು. ಯುದ್ಧವು ದ್ವಂದ್ವದಂತಿದೆ. ಕೆಲವೊಮ್ಮೆ ಅವನ ಗೆಲುವಾಗುತ್ತದೆ ಮತ್ತು ಕೆಲವೊಮ್ಮೆ ಇವನ ಗೆಲುವಾಗುತ್ತದೆ. ಮೂಗು ಮತ್ತು ಕಿವಿಗಳನ್ನು ಕತ್ತರಿಸಿದ ಕೆಲವು ಮೃತದೇಹಗಳನ್ನು ನೀವು ಕಾಣಬಹುದು ಅಂದರೆ ಮುಸಲ್ಲ ಮಾಡಲಾದ ಮೃತದೇಹಗಳು. ಅವನು ಹೇಳಿದನು: ನಾನು ಹಾಗೆ ಮಾಡಲು ಆದೇಶಿಸಲಿಲ್ಲ, ಆದರೆ ಅದನ್ನು ತಪ್ಪು ಎಂದೂ ಸಹ ಪರಿಗಣಿಸಲಿಲ್ಲ. ನಂತರ ಅವನು **ಉಲು ಹುಬುಲ್-ಉಲು ಹುಬುಲ್**, ಹುಬುಲ್ಗೆ ಜಯವಾಗಲಿ ಹುಬುಲ್ಗೆ ಜಯವಾಗಲಿ ಎಂದು ಜೈಕಾರ ಹಾಕಿದನು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಈಗ ಅವನಿಗೆ ಉತ್ತರಿಸುವುದಿಲ್ಲವೇ? ಸಹಬಿಯರು ಹೇಳಿದರು, ಯಾ ರಸೂಲಲ್ಲಾಹ್(ಸ)! ನಾವೇನು ಹೇಳಬೇಕು? ಹಝ್ರತ್ ಪೈಗಂಬರ್(ಸ) ಹೇಳಿದರು ನೀವು **ವಲ್ಲಾಹು ಅಅ್ಲ ವ ಅಜಲ್** ಸರ್ವಶಕ್ತನಾದ ಅಲ್ಲಾಹನು ಅತ್ಯುನ್ನತನು ಮತ್ತು ಸರ್ವಶ್ರೇಷ್ಠನು. ಆಗ ಅಬೂಸುಫ್ಯಾನ್ ಉಝ್ಝಾ ಹೆಸರಿನ ವಿಗ್ರಹವು ನಮ್ಮದಾಗಿದೆ ಮತ್ತು ನಿಮಗಾಗಿ ಯಾವುದೇ ಉಝ್ಝಾವಿಲ್ಲ ಎಂದು ಹೇಳಿದನು. ಇದನ್ನು ಕೇಳಿದ ಹಝ್ರತ್ ಪೈಗಂಬರ್(ಸ) ಅವರು, ನೀವು ಅವನಿಗೆ ಉತ್ತರಿಸುವುದಿಲ್ಲವೇ? ಹಝ್ರತ್ ಬಾರಾ ಬಿನ್ ಆಝಿಬ್(ರ) ಹೇಳುತ್ತಾರೆ: ಸಹಾಬಿಯವರು ಹೇಳಿದರು ಯಾ ರಸೂಲಲ್ಲಾಹ್(ಸ)! ನಾವೇನು ಹೇಳಬೇಕು? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ನೀವು **ಅಲ್ಲಾಹು ಮೌಲಾನಾ ವಲಾ ಮೌಲಾ ಲಕುಮ್** ಅಂದರೆ ಅಲ್ಲಾಹನು ನಮ್ಮ ಸಹಾಯಕನು ಮತ್ತು ನಿಮಗೆ ಯಾವುದೇ ಸಹಾಯಕನಿಲ್ಲ ಎಂದು ಹೇಳಿರಿ ಎಂದು ಹೇಳಿದರು.

(ಸಹೀಹ್ ಅಲ್-ಬುಖಾರಿ, ಕಿತಾಬುಲ್-ಜಿಹಾದ್ ವಾಲ್-ಸೈರ್, ಹದೀಸ್-3039)

ತದನಂತರ, ಅಬೂಸುಫ್ಯಾನ್ ಮುಸ್ಲಿಮರನ್ನು ಕರೆದು ಹೇಳಿದನು: ಮುಂದಿನ ವರ್ಷ ಬದ್ರ್ ಕ್ಷೇತ್ರದಲ್ಲಿ ನಿಮ್ಮನ್ನು ಮತ್ತೆ ಭೇಟಿ ಮಾಡುತ್ತೇವೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ತಮ್ಮ ಸಹಾಬೀಯರಿಂದ ಓರ್ವ ಸಹಾಬಿಯನ್ನು ಹೇಳಿದರು, ಹೌದು, ನಾವು ನಿಮ್ಮನ್ನು ಭೇಟಿಯಾಗುವುದಾಗಿ ಭರವಸೆ ನೀಡಿದ್ದೇವೆ. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ 2, ಪುಟ 333, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 2008)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖತಮನ್ನಬೀಯೀನ್(ಸ) ನಲ್ಲಿ ಬರೆದಿದ್ದಾರೆ, "ಇಲ್ಲಿ ಮುಸ್ಲಿಮರು ತಮ್ಮ ಚಿಕಿತ್ಸೆಯಲ್ಲಿ ತೊಡಗಿದ್ದರು, ಮತ್ತೊಂದೆಡೆ ಅಂದರೆ ಯುದ್ಧಭೂಮಿಯ ಕೆಳಗೆ, ಮಕ್ಕಾದ ಖುರೈಷರು ಮುಸ್ಲಿಮರ ಹುತಾತ್ಮರ ದೇಹಗಳನ್ನು ಕ್ರೂರವಾಗಿ ಅಪವಿತ್ರಗೊಳಿಸುತ್ತಿದ್ದರು. ಮುಸಲ್ಲಾಹ್ ಎಂಬ ಅನಾಗರಿಕ ಆಚರಣೆಯನ್ನು ಎಲ್ಲಾ ಭಯಾನಕತೆಯಿಂದ ನಡೆಸಲಾಯಿತು ಮತ್ತು ಮತ್ತು ಮೆಕ್ಕಾದ ರಕ್ತಪಿಪಾಸು ಮೃಗಗಳು ಮುಸ್ಲಿಂ ಹುತಾತ್ಮರ ಮೃತದೇಹಗಳೊಂದಿಗೆ ತಮ್ಮ ಕೈಲಾದಷ್ಟು ರೀತಿಯಲ್ಲಿ ತಮಗೆ ಬೇಕಾದ ರೀತಿಯಲ್ಲಿ ವರ್ತಿಸಿದರು. ಖುರೈಶರ ಮಹಿಳೆಯರು ಮುಸ್ಲಿಮರ ಮೂಗು ಮತ್ತು ಕಿವಿಗಳನ್ನು ಕತ್ತರಿಸಿ ಹಾರವನ್ನು ಧರಿಸಿದ್ದರು. ಅಬೂಸುಫ್ಯಾನ್‌ನ ಪತ್ನಿ ಹಿಂದ್ ಅವಳು ಹಝ್ರತ್ ಹಮ್ಝಾ(ರ) ಅವರ ಯಕೃತ್ತನ್ನು ಹೊರತೆಗೆದು ಅಗಿಯುತ್ತಾಳೆ. ಆದ್ದರಿಂದ, ಸರ್ ವಿಲಿಯಮ್ ಮ್ಯೂರ್ ಹೇಳಿಕೆಯ ಪ್ರಕಾರ, ಖುರೈಷಿಗಳು ಮುಸ್ಲಿಮರ ಮೃತ ದೇಹಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡರು ಮತ್ತು ಮಕ್ಕಾದ ನಾಯಕರು ಹಝ್ರತ್ ಪೈಗಂಬರ್(ಸ) ಅವರ ಮೃತದೇಹವನ್ನು ಯುದ್ಧಭೂಮಿಯಲ್ಲಿ ಹುಡುಕುವುದರಲ್ಲಿ ನಿರತರಾಗಿದ್ದರು ಮತ್ತು ಅವರ ಕಣ್ಣುಗಳು ಆ ದೃಶ್ಯವನ್ನು ಕಾಣಲು ಕಾತುರದಲ್ಲಿದ್ದವು, ಆದರೆ ಆ ವಿಷಯವು ಅವರಿಗೆ ದೊರೆಯಲಿಲ್ಲ. ಹಝ್ರತ್ ಪೈಗಂಬರ್(ಸ) ಅಲ್ಲಿ ಇರಲಿಲ್ಲ. "ಈ ಹುಡುಕಾಟದಿಂದ ನಿರಾಶೆಗೊಂಡ ಅಬೂಸುಫ್ಯಾನ್ ತನ್ನ ಕೆಲವು ಸಹಚರರನ್ನು ತನ್ನೊಂದಿಗೆ ಕರೆದುಕೊಂಡು ಮುಸ್ಲಿಮರು ಸೇರಿದ್ದ ಕಣಿವೆಯ ಕಡೆಗೆ ಹೋಗಿ ಅದರ ಬಳಿ ನಿಂತು ಹೀಗೆ ಕೂಗಿ ಹೇಳಿದನು: ಓ ಮುಸ್ಲಿಮರೇ! ನಿಮ್ಮ ನಡುವೆ ಮುಹಮ್ಮದ್(ಸ) ಇದ್ದಾರೆಯೇ?" ಹಝ್ರತ್ ಪೈಗಂಬರ್(ಸ) ಹೇಳಿದರು, "ಯಾವುದೇ ಉತ್ತರವನ್ನು ನೀಡಬೇಡಿ. ಆದ್ದರಿಂದ ಎಲ್ಲಾ ಸಹಚರರು ಮೌನವಾಗಿದ್ದರು. ನಂತರ ಅವನು ಅಬೂಬಕರ್(ರ) ಮತ್ತು ಉಮರ್(ರ) ಅವರನ್ನು ಕೇಳಿದನು, ಆದರೆ ಹಝ್ರತ್ ಪೈಗಂಬರ್(ಸ) ಅವರ ಆಜ್ಞೆಯ ಪ್ರಕಾರ ಅದಕ್ಕೆ ಉತ್ತರ ನೀಡಲಿಲ್ಲ. ಬದುಕಿದ್ದರೆ ಪ್ರತಿಕ್ರಿಯಿಸುತ್ತಿದ್ದರು ಎಂಬ ಕಾರಣಕ್ಕೆ ಇವರೆಲ್ಲರನ್ನು ಕೊಂದು ಹಾಕಲಾಗಿದೆ ಎಂದು ದೃಢವಾದ ಹೆಮ್ಮೆಯ ಧ್ವನಿಯಲ್ಲಿ ಹೇಳಿದನು. ಆ ವೇಳೆ ಹಝ್ರತ್ ಉಮರ್(ರ) ಬಿಡಲಿಲ್ಲ ಅಸಹಾಯಕತೆಯಿಂದ ಹೇಳಿದರು ಓ ಅಲ್ಲಾಹನ ವೈರಿ! ನೀನು ಸುಳ್ಳು ಹೇಳುತ್ತಿದ್ದೀಯ, ನಾವೆಲ್ಲರೂ ಜೀವಂತವಾಗಿದ್ದೇವೆ ಮತ್ತು ಅಲ್ಲಾಹನು ನಮ್ಮ ಕೈಯಿಂದ ನಿನ್ನನ್ನು ಅವಮಾನಿಸುತ್ತಾನೆ. ಅಬೂಸುಫ್ಯಾನ್ ಹಝ್ರತ್ ಉಮರ್(ರ) ಅವರ ಧ್ವನಿಯನ್ನು ಗುರುತಿಸಿ ಹೇಳಿದನು, "ಉಮರ್! ನಿಜ ಹೇಳು, ಮುಹಮ್ಮದ್(ಸ) ಬದುಕಿದ್ದಾರೆಯೇ? ಅದಕ್ಕೆ ಹಝ್ರತ್ ಉಮರ್(ರ) ಹೇಳಿದರು, "ಹೌದು, ಹೌದು! ಅಲ್ಲಾಹನ ಅನುಗ್ರಹದಿಂದ ಅವರು ಜೀವಂತವಾಗಿದ್ದಾರೆ ಮತ್ತು ನಿನ್ನ ಮಾತುಗಳನ್ನು ಕೇಳುತ್ತಿದ್ದಾರೆ. ಅಬೂಸುಫ್ಯಾನ್ ದುರ್ಬಲ ಧ್ವನಿಯಲ್ಲಿ ಹೇಳಿದನು. ಹಾಗಾದರೆ ಇಬ್ನೆ ಕಮಿಯಾ ಸುಳ್ಳು ಹೇಳಿದ್ದಾನೆ ಏಕೆಂದರೆ ನಾನು ಅವನಿಗಿಂದ ನಿಮಗೆ ಹೆಚ್ಚು ಸತ್ಯವಂತರು ಎಂದು ಪರಿಗಣಿಸುತ್ತೇನೆ. ತದನಂತರ ಅಬೂಸುಫ್ಯಾನ್ ಬಹಳ ದೊಡ್ಡ ಧ್ವನಿಯಲ್ಲಿ ಕರೆದು ಹೇಳಿದನು. ಊಲುಲ್ ಹುಬಲ್ ಎಂದರೆ "ಓ ಹೂಬಲ್, ನೀನು ಉದಾತ್ತನಾಗಲಿ." ಸಹಾಬೀಯರಿಗೆ ಹಝ್ರತ್ ಪೈಗಂಬರ್(ಸ) ಅವರ ಆಜ್ಞೆಯು ಕಾರಣದಿಂದ ಮೌನವಾಗಿದ್ದರು. ಏಕೆಂದರೆ ಹಝ್ರತ್ ಪೈಗಂಬರ್(ಸ) ಮುಂಚೆ ಉತ್ತರಿಸಲು ತಡೆದಿದ್ದರು. ಈಗ ಅವರು ಸರ್ವಶಕ್ತನಾದ ಅಲ್ಲಾಹನ ಮುಂದೆ ವಿಗ್ರಹಗಳ ಹೆಸರು ತೆಗೆದುಕೊಂಡಾಗ ಅವರು ತಾಳ್ಮೆ ವಹಿಸದೆ ಸಹಾಬಿಯವರಿಗೆ ಹೇಳಿದರು "ನೀವು ಏಕೆ ಉತ್ತರಿಸುವುದಿಲ್ಲ?" ಅದಕ್ಕೆ ಸಹಾಬಿಯವರು ಕೇಳಿದರು ಯಾ ರಸೂಲಲ್ಲಾಹ್!! ನಾವು ಏನು ಉತ್ತರಿಸಬೇಕು? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, **ವಲ್ಲಾಹು ಅಅ್ಲ ವ ಅಜಲ್**, ಅಂದರೆ, ಉನ್ನತ ಮತ್ತು ಘನತೆಯು ಅಲ್ಲಾಹನಿಗೆ ಮಾತ್ರ ಸೇರಿದೆ." ಆಗ ಅಬೂಸುಫ್ಯಾನ್ ಉಝ್ಝಾ ಹೆಸರಿನ ವಿಗ್ರಹವು ನಮ್ಮದಾಗಿದೆ ಮತ್ತು ನಿಮಗಾಗಿ ಯಾವುದೇ ಉಝ್ಝಾವಿಲ್ಲ ಎಂದು ಹೇಳಿದನು. ಇದನ್ನು ಕೇಳಿದ ಹಝ್ರತ್ ಪೈಗಂಬರ್(ಸ) ಅವರು, ನೀವು ಅವನಿಗೆ ಉತ್ತರಿಸುವುದಿಲ್ಲವೇ? ಹಝ್ರತ್ ಬಾರಾ ಬಿನ್ ಅಝಿಬ್(ರ) ಹೇಳುತ್ತಾರೆ: ಸಹಾಬಿಯವರು ಹೇಳಿದರು ಯಾ ರಸೂಲಲ್ಲಾಹ್(ಸ)! ನಾವೇನು ಹೇಳಬೇಕು? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ನೀವು

**ಅಲ್ಲಾಹು ಮೌಲಾನಾ ವಲಾ ಮೌಲಾ ಲಕುಮ್** ಅಂದರೆ ಅಲ್ಲಾಹನು ನಮ್ಮ ಸಹಾಯಕನು ಮತ್ತು ನಿಮಗೆ ಯಾವುದೇ ಸಹಾಯಕನಿಲ್ಲ ಎಂದು ಹೇಳಿರಿ ಎಂದು ಹೇಳಿದರು. ತದನಂತರ, ಅಬೂಸುಫ್ಯಾನ್ ಮುಸ್ಲಿಮರನ್ನು ಕರೆದು ಹೇಳಿದನು: ಮುಂದಿನ ವರ್ಷ ಬದ್ರ್ ಕ್ಷೇತ್ರದಲ್ಲಿ ನಿಮ್ಮನ್ನು ಮತ್ತೆ ಭೇಟಿ ಮಾಡುತ್ತೇವೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ತಮ್ಮ ಸಹಾಬೀಯರಿಂದ ಓರ್ವ ಸಹಾಬಿಯನ್ನು ಹೇಳಿದರು, ಹೌದು, ನಾವು ನಿಮ್ಮನ್ನು ಭೇಟಿಯಾಗುವುದಾಗಿ ಭರವಸೆ ನೀಡಿದ್ದೇವೆ.

ಅವರು(ರ) ಹೇಳಿದರು: ಒಂದು ವಿಚಿತ್ರವಾದ ಸಂಗತಿ ಎಂದರೆ ಈ ಸಂದರ್ಭದಲ್ಲಿ ಖುರೈಷಿಗಳು ಮುಸ್ಲಿಮರ ವಿರುದ್ಧ ಮೇಲುಗೈ ಸಾಧಿಸಿದ್ದರೂ ಮತ್ತು ಬಾಹ್ಯ ಸಾಧನಗಳ ಪ್ರಕಾರ, ಅವರು ಬಯಸಿದರೆ ತಮ್ಮ ಈ ವಿಜಯದಿಂದ ಲಾಭಗಳಿಸಿ ಮದೀನದ ಮೇಲೆ ದಾಳಿ ನಡೆಸಲು ಅವರಿಗೆ ಸೂಕ್ತ ದಾರಿ ತೆರೆದಿತ್ತು ಆದರೆ ಈ ವಿಜಯದ ಹೊರತಾಗಿಯೂ ಕುರೈಶಿಗಳ ಹೃದಯಗಳು ಇನ್ನೂ ಪುಳಕಗೊಳ್ಳುವ ರೀತಿಯಲ್ಲಿ ದೇವರ ವಿಧಿ ಸಂಭವಿಸಿತು ಮತ್ತು ಉಹುದ್ ಯುದ್ಧ ಭೂಮಿಯಲ್ಲಿ ಗಳಿಸಿದ ವಿಜಯದ ಹೊತಾಗಿಯೂ ಅವರು ಸಾಧ್ಯವಾದಷ್ಟು ಬೇಗ ಮಕ್ಕಾಗೆ ಮರಳುವುದು ಸೂಕ್ತವೆಂದು ಭಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ತಕ್ಷಣವೇ ಹಝ್ರತ್ ಅಬೂಬಕರ್(ರ.ಅ) ಮತ್ತು ಹಝ್ರತ್ ಜುಬೈರ್(ರ.ಅ) ಸೇರಿದಂತೆ ಎಪ್ಪತ್ತು ಸಹಚರರ ಸೈನ್ಯವನ್ನು ಸಿದ್ಧಪಡಿಸಿ ಖುರೈಶರ ಸೈನ್ಯದ ಹಿಂದೆ ಕಳುಹಿಸಿದರು. ಇದು ಬುಖಾರಿಯ ವರದಿಯಾಗಿದೆ. ಸಾಮಾನ್ಯ ಇತಿಹಾಸಕಾರರು ಹೇಳುವಂತೆ ಹಝ್ರತ್ ಅಲಿ(ರ) ಅಥವಾ ಕೆಲವು ವರದಿಗಳ ಪ್ರಕಾರ, ಅವರು ಖುರೈಷಿಗಳ ಹಿಂದೆ ಸಾದ್ ಬಿನ್ ವಕ್ಕಾಸ್(ರ) ಅವರನ್ನು ಕಳುಹಿಸಿದರು ಮತ್ತು ಖುರೈಶ್ ಸೈನ್ಯವನ್ನು ಹಿಂಬಾಲಿಸಿ ಅವರು ಮದೀನಾದ ಮೇಲೆ ದಾಳಿ ಮಾಡುತ್ತಾರೆಯೇ ಎಂದು ಪರಿಶೀಲಿಸಲು ಆಜ್ಞಾಪಿಸಿದರು. ಅದೇ ರೀತಿ ಅವರು(ಸ) ಅವರಿಗೆ ಹೇಳಿದರು, ಖುರೈಷಿಗಳು ಒಂಟೆಗಳ ಮೇಲೆ ಸವಾರಿ ಮಾಡುತ್ತಿದ್ದರೆ ಮತ್ತು ಕುದುರೆಗಳನ್ನು ಖಾಲಿ ಓಡಿಸುತ್ತಿದ್ದರೆ, ಅವರು ಮಕ್ಕಾಗೆ ಹಿಂತಿರುಗುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಬೇಕು, ಅವರು ಮದೀನಾವನ್ನು ಆಕ್ರಮಣ ಮಾಡುವ ಉದ್ದೇಶವನ್ನು ಹೊಂದಿಲ್ಲ ಮತ್ತು ಆದರೆ ಅವರು ಕುದುರೆ ಸವಾರಿ ಮಾಡುತ್ತಿದ್ದರೆ, ಅವರ ಉದ್ದೇಶವು ಮದೀನದ ಮೇಲೆ ಅಕ್ರಮಣ ಮಾಡುವುದಾಗಿದೆ ಎಂದು ಅರ್ಥಮಾಡಿಕೊಳ್ಳಿ ಮತ್ತು ಖುರೈಷಿಗಳು ಮದೀನಾದ ಕಡೆಗೆ ತಿರುಗಿದರೆ, ತಕ್ಷಣವೇ ಹಝ್ರತ್ ಪೈಗಂಬರ್(ಸ) ಅವರಿಗೆ ಇದರ ಬಗ್ಗೆ ತಿಳಿಸಬೇಕೆಂದು ಹೇಳಿ ಬಹಳ ದೃಢ ಸಂಕಲ್ಪದೊಂದಿಗೆ ದೃಢವಾದ ಧ್ವನಿಯಲ್ಲಿ ಉತ್ಸುಕರಾಗಿ ಹೇಳಿದರು ಖುರೈಶರು ಮದೀನದ ಮೇಲೆ ಅಕ್ರಮಣ ಮಾಡಲು ಬಯಸಿದರೆ ಅಲ್ಲಾಹನ ಆಣೆ!! ನಾವು ಅವರೊಂದಿಗೆ ಹೋರಾಡುತ್ತೇವೆ ಮತ್ತು ಈ ದಾಳಿಯ ರುಚಿಯನ್ನು ಅವರಿಗೆ ನೀಡುತ್ತೇವೆ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಕಳುಹಿಸಿದ ದೂತನು ಹಝ್ರತ್ ಪೈಗಂಬರ್(ಸ)ರ ಸೂಚನೆಯಂತೆ ಹೋದರು ಮತ್ತು ಶೀಘ್ರದಲ್ಲೇ ಖುರೈಶರ ಸೈನ್ಯವು ಮಕ್ಕಾದ ಕಡೆಗೆ ಸಾಗುತ್ತಿದೆ ಎಂಬ ಸುದ್ದಿಯೊಂದಿಗೆ ಹಿಂತಿರುಗಿದರು." (ಸೀರ'ತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ,(ರ), ಪುಟ-498-500)

ಹಝ್ರತ್ ಪೈಗಂಬರ್(ಸ) ಗಾಯಗೊಂಡು ಪ್ರಜ್ಞೆ ತಪ್ಪಿದ ಬಗ್ಗೆ ಮತ್ತು ಅದರ ನಂತರದ ಘಟನೆಯ ಬಗ್ಗೆ ಪ್ರಸ್ತಾಪಿಸಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸ್ವಲ್ಪ ಸಮಯದ ನಂತರ ಹಝ್ರತ್ ಪೈಗಂಬರ್(ಸ)ರ ಪ್ರಜ್ಞೆ ಮರಳಿ ಬಂತು, ಸಹಾಬಿಯರು ನಾಲ್ಕೂ ಕಡೆಗೆ ಜನರನ್ನು ಕಳುಹಿಸಿದರು. ಹೀಗೆ ಮುಸ್ಲಿಮರು ಒಟ್ಟು ಸೇರಿದರು. ಹಝ್ರತ್ ಪೈಗಂಬರ್(ಸ) ಅವರ ಜೊತೆಗೆ ಪರ್ವತದ ಕಡೆಗೆ ಹೋದರು. ಪರ್ವತದ ಕೆಳಗೆ ಅಳಿದುಳಿದ ಸೈನ್ಯ ನಿಂತಿದ್ದಾಗ ಅಬೂಸುಫ್‌ಯಾನ್ ಬಹಳ ಜೋರಾಗಿ ಕೂಗುತ್ತಾ ಹೀಗೆ ಹೇಳಿದನು: ನಾವು ಮುಹಮ್ಮದ್‌ರನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ವಧಿಸಿದ್ದೇವೆ. ಹಝ್ರತ್ ಪೈಗಂಬರ್(ಸ) ಅಬುಸುಫ್‌ಯಾನಿನ ಮಾತಿಗೆ ಉತ್ತರಿಸಲಿಲ್ಲ. ಇಸ್ಲಾಮಿನ ಸೇನೆಯಿಂದ ಇದಕ್ಕೆ ಉತ್ತರ ಲಭಿಸದೇ ಇದ್ದಾಗ ತನ್ನ ಭಾವನೆ ಸರಿಯೆಂದು ಅಬೂಸುಫ್‌ಯಾನಿಗೆ ಖಚಿತವಾಯಿತು. ನಾವು ಅಬೂಬಕರ್ ಮತ್ತು ಉಮರ್‌ರನ್ನು ಕೂಡ ವಧಿಸಿದ್ದೇವೆ ಎಂದು ಆತನು ವಾದಿಸಿದನು... ನಾವು ಇಸ್ಲಾಮಿನ ಸ್ಥಾಪಕರನ್ನೂ ಅವರ ಬಲ ಮತ್ತು ಎಡ ಬಾಹುಗಳನ್ನೂ ವಧಿಸಿದ್ದೇವೆ ಎಂದು ಆಗ ಸತ್ಯನಿಷೇಧಿಗಳಿಗೆ ಖಚಿತವಾಯಿತು. ಹೀಗೆ ಅಬೂಸುಫ್‌ಯಾನ್ ಮತ್ತು ಅವರ ಜೊತೆಗಾರರು ಸಂತೋಷದ ಘೋಷಣೆ ಕೂಗಿದರು.... 'ನಮ್ಮ ಆದರಣೀಯ ಹುಬಲಿಗೆ ಜೈಕಾರ. ಅದು ಇಂದು ಇಸ್ಲಾಮನ್ನು ಕೊನೆಗೊಳಿಸಿದೆ' ಎಂದು ಸತ್ಯನಿಷೇಧಿಗಳು ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಗಾಯಗೊಂಡ ಮುಸ್ಲಿಮರ ಮೇಲೆ ಸತ್ಯನಿಷೇಧಿಗಳ ಸೇನೆ ಪುನಃ ದಾಳಿ ನಡೆಸದೇ ಇರಲಿಕ್ಕಾಗಿ ಮತ್ತು ಬೆರಳೆಣಿಕೆಯಷ್ಟು ಮಾತ್ರವಿದ್ದ ಮುಸ್ಲಿಮರು ಶತ್ರುಸೇನೆಯ ಕೈಗಳಲ್ಲಿ ವಧಿಸಲ್ಪಡದೇ ಇರಲಿಕ್ಕಾಗಿ ತನ್ನ ಮರಣ, ಅಬೂಬಕರ್(ರ) ಮತ್ತು ಉಮರ್(ರ)ರ ಮರಣದ ಘೋಷಣೆಯ ವೇಳೆ ಸುಮ್ಮನಿರಲು ಉಪದೇಶಿಸಿದ ಅದೇ ರಸೂಲುಲ್ಲಾಹ್(ಸ) ಈಗ ಏಕದೇವನ ಗೌರವದ ವಿಷಯ ಬಂದಾಗ ಮತ್ತು ಶಿರ್ಕಿನ ಘೋಷಣೆ ಮೈದಾನದಲ್ಲಿ ಮಾಡಲಾದಾಗ ಅವರ ಆತ್ಮ ಅಸಮಾಧಾನಗೊಂಡಿತು. ಅವರು ಅತ್ಯಂತ ಆವೇಶದಿಂದ ಸಹಾಬಿಯರ ಕಡೆಗೆ ನೋಡುತ್ತಾ ಕೇಳಿದರು: ನೀವೇಕೆ ಉತ್ತರಿಸುತ್ತಿಲ್ಲ. ಸಹಾಬಿಯರು ಕೇಳಿದರು: ಯಾ ರಸೂಲಲ್ಲಾಹ್, ನಾವೇನು ಹೇಳಬೇಕು? ಹಝ್ರತ್ ಪೈಗಂಬರ್(ಸ) ಹೇಳಿದರು: ಹುಬಲಿನ ವೈಭವ ಉನ್ನತಗೊಂಡಿತು ಎಂದು ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳಿರಿ. ಏಕನೂ ಸಹಭಾಗಿ ಇಲ್ಲದವನೂ ಆದ ಅಲ್ಲಾಹನೇ ಆದರಣೀಯನು ಮತ್ತು ಅವನ ವೈಭವ ಉನ್ನತವಾಗಿದೆ ಎಂದು ಹೇಳಿರಿ.

ಹೀಗೆ ತಾವು ಜೀವಂತರಾಗಿದ್ದೇವೆ ಎಂಬ ವಾರ್ತೆಯನ್ನು ಹಝ್ರತ್ ಪೈಗಂಬರ್(ಸ) ಶತ್ರುಗಳಿಗೆ ತಿಳಿಸಿದರು. ಈ ಧೈರ್ಯ ಮತ್ತು ಶೌರ್ಯದ ಉತ್ತರದ ಪ್ರಭಾವ ಶತ್ರುಗಳ ಸೈನ್ಯದ ಮೇಲೆ ಎಷ್ಟು ಆಳವಾಗಿತ್ತು ಎಂದರೆ, ಈ ಉತ್ತರದಿಂದ ಅವರ ಪ್ರತೀಕ್ಷೆಗಳು ಮಣ್ಣುಪಾಲಾಯಿತು. ಅವರ ಮುಂದೆ ಒಂದು ಮುಷ್ಟಿಯಷ್ಟು ಮಾತ್ರ ಮುಸ್ಲಿಮರು ನಿಂತಿದ್ದರು. ಅವರ ಮೇಲೆ ದಾಳಿ ನಡೆಸಿ ಅವರನ್ನು ವಧಿಸುವುದು ಖಂಡಿತ ಸಾಧ್ಯವಾಗಿತ್ತು. ಆದರೆ ಪುನಃ ದಾಳಿ ನಡೆಸಲು ಅವರಿಗೆ ಧೈರ್ಯ ಬರಲಿಲ್ಲ. ಅವರು ತಮಗೆ ಲಭಿಸಿದಷ್ಟು ವಿಜಯದ ಸಂತೋಷವನ್ನು ಆಚರಿಸುತ್ತಾ ಮಕ್ಕಾಗೆ ಮರಳಿ ಹೋದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-252-253)

ಹಝ್ರತ್ ಮುಸ್ಲಿಹ್ ಮೌಊದ್(ರ) ವಿವಿಧ ಮಗ್ಗುಲುಗಳಲ್ಲಿ ವಿವಿಧ ಎಡೆಗಳಲ್ಲಿ ಈ ಘಟನೆಯನ್ನು ವಿವರಿಸಿರುವರು. ಅವುಗಳನ್ನು ಮುಂದಿನ ಬಾರಿ ವಿವರಿಸುತ್ತೇನೆ.

ಈಗ ನಾನು ಸಾಮಾನ್ಯವಾಗಿ ದುಆಗಾಗಿ ಹೇಳುವಂತೆ ಪೆಲಸ್ತೀನಿಯರ ಪ್ರಚಲಿತ ಅವಸ್ಥೆಗಳಿಗಾಗಿ ದುಆಗಳನ್ನು ಮುಂದುವರಿಸಿರಿ.

ಗಾಝಾದಲ್ಲಿ ಯುದ್ಧ ವಿರಾಮದ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಲಾಗುತ್ತಿದೆ. ಬಹುಶಃ ಇಸ್ರೇಲ್ ಸರ್ಕಾರ ಕೂಡ ಸ್ವಲ್ಪ ಮಟ್ಟಿಗೆ ಒಪ್ಪಬಹುದು. ಆದರೆ ಲೆಬನಾನಿನ ಗಡಿಪ್ರದೇಶದೊಂದಿಗೆ ಯುದ್ಧ ಹೊತ್ತಿಕ್ಕುವ ಸಾಧ್ಯತೆ ಹೆಚ್ಚು ವರ್ಧಿಸುತ್ತಿದೆ ಮತ್ತು ಅದರ ಪ್ರಭಾವ ವೆಸ್ಟ್ ಬ್ಯಾಂಕಿನ ಪೆಲಸ್ತೀನಿಯರ ಮೇಲೂ ಉಂಟಾಗಬಹುದು. ಪಾಶ್ಚಿಮಾತ್ಯ ಸರ್ಕಾರಗಳಲ್ಲಿ ನೀತಿಪಾಲನೆಯ ಯಾವುದೇ ಹೇಳಹೆಸರೇ ಇಲ್ಲ. ದೌರ್ಜನ್ಯ ಮಿತಿಮೀರುತ್ತಿದೆ ಎಂದು ಈಗಂತು ಅವರ ಸ್ವಂತ ಅಂಕಣಗಾರರು ಇನ್ನಷ್ಟು ಬಹಿರಂಗವಾಗಿ ಬರೆಯಲು ಶುರುಮಾಡಿದ್ದಾರೆ. ಅಮೇರಿಕದ ನೇತಾರ ಕೇವಲ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲಿಕ್ಕಾಗಿ ಈ ಯುದ್ಧಗಳಿಗೆ ಎಣ್ಣೆ ಸುರಿಯುತ್ತಿದ್ದಾರೆ. ಇದೇ ಕಾರಣದಿಂದ ಅವರ ಆದಾಯ ವರ್ಧಿಸುತ್ತಿದೆ. ಏಕೆಂದರೆ ಅವರ ಆಯುಧ ಕಾರ್ಖಾನೆಗಳು ಹೆಚ್ಚು ಉತ್ಪಾದನೆ ನಡೆಸುತ್ತಿವೆ. ಅಮೇರಿಕ ತನ್ನ ಆರ್ಥಿಕತೆಯನ್ನು ಉತ್ತಮಗೊಳಿಸಲಿಕ್ಕಾಗಿ ಈ ಯುದ್ಧವನ್ನು ಸುದೀರ್ಘಗೊಳಿಸಲು ಪ್ರಯತ್ನಿಸುತ್ತಿದೆ ಮತ್ತು ಲೋಕದಲ್ಲಿ ಗಲಭೆ ಹರಡುತ್ತಿದೆ ಎಂದು ಈಗಂತು ಅವರ ಸ್ವಂತ ವಿಶ್ಲೇಷಕರು ಸಹ ಹೇಳುತ್ತಿದ್ದಾರೆ. ಅಲ್ಲಾಹನ ಹಿಡಿತದಿಂದ ಇವರಿಗೆ ಬಚಾವಾಗಲು ಸಾಧ್ಯವಲ್ಲ ಎಂದು ಇವರಿಗೆ ಗೊತ್ತಿಲ್ಲ.

ಅಹ್ಮದಿಯರು ಹೇಗಿದ್ದರೂ ತಮ್ಮ ದುಆಗಳಲ್ಲಿ ಮತ್ತು ಸಂಪರ್ಕಗಳ ಮೂಲಕ ನಾಶದಿಂದ ರಕ್ಷಣೆ ಪಡೆಯಲು ತಮ್ಮ ಪಾತ್ರವನ್ನು ನಿರ್ವಹಿಸಬೇಕು.

ನೆರವು ನೀಡುವ ವಿಶ್ವಸಂಸ್ಥೆಯ ಏಜೆನ್ಸಿಗೆ ಅಮೇರಿಕ, ಯು.ಕೆ. ಮುಂತಾದ ದೇಶಗಳು ಆರ್ಥಿಕ ಸಹಾಯ ನೀಡುವುದನ್ನು ನಿಲ್ಲಿಸಿವೆ ಎಂದು ಕೆಲವು ದಿನಗಳ ಹಿಂದೆ ವಾರ್ತೆಯೂ ಇತ್ತು. ವಿಶ್ವಸಂಸ್ಥೆಯ ಹನ್ನೊಂದು ಹನ್ನೆರಡು ಸದಸ್ಯರು ಹಮಾಸಿನೊಂದಿಗೆ ಸೇರಿಕೊಂಡಿದ್ದಾರೆ ಎಂದು ಹೇಳಿಕೊಂಡು ಪೆಲಸ್ತೀನಿಯರಿಗೆ ಆರ್ಥಿಕ ನೆರವು ನೀಡುವುದನ್ನು ಈ ದೇಶಗಳು ನಿರಾಕರಿಸಿವೆ. ಯಾವುದೇ ನಿರ್ವಾಹವಿಲ್ಲದ ಸ್ಥಿತಿಗೆ ಅವರನ್ನು ತಲುಪಿಸಲಿಕ್ಕಾಗಿ ಹೀಗೆ ಮಾಡುತ್ತಿದ್ದಾರೆ. ಆದರೆ ಆಶ್ಚರ್ಯಕರವಾದ ಸಂಗತಿಯೇನೆಂದರೆ, ಪಾಶ್ಚಿಮಾತ್ಯ ರಾಷ್ಟ್ರಗಳು ನೆರವು ನೀಡುವುದನ್ನು ನಿಲ್ಲಿಸಿದರೆ, ನಾವು ಸಹಾಯ ಮಾಡುವೆವು ಎಂದು ತೈಲದ ಸಂಪತ್ತು ಇರುವ ಮುಸ್ಲಿಮ್ ದೇಶಗಳು ಘೋಷಣೆ ಮಾಡಿದ್ದಾಗಿ ಯಾವುದೇ ವಾರ್ತೆ ಬರುತ್ತಿಲ್ಲ. ನಮಗೆ ಆರ್ಥಿಕ ನೆರವು ಲಭಿಸದಿದ್ದರೆ ಫೆಬ್ರವರಿಯ ನಂತರ ನಾವು ಯಾವುದೇ ಸಹಾಯವನ್ನು ತಲುಪಿಸಲು ಸಾಧ್ಯವಲ್ಲ ಎಂದು ವಿಶ್ವಸಂಸ್ಥೆಯ ಏಜೆನ್ಸಿ ಘೋಷಿಸಿದೆ.

ಹೇಗಿದ್ದರೂ ಅಲ್ಲಾಹನು ಮುಸ್ಲಿಂ ದೇಶಗಳಿಗೂ ತಮ್ಮ ಪಾತ್ರವನ್ನು

ನಿರ್ವಹಿಸಲು ಸೌಭಾಗ್ಯ ನೀಡಲಿ. ಲೋಕದಲ್ಲಿ ನಡೆಯುತ್ತಿರುವ ಪಿತೂರಿ ಕೂಡ ಕೊನೆಗೊಳ್ಳಲಿ.

ಈಗ ಇರಾನಿನ ಜೊತೆಗೂ ಯುದ್ಧದ ಸಾಧ್ಯತೆ ವರ್ಧಿಸುತ್ತಿದೆ. ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ನಮ್ಮ ಒಬ್ಬ ನಿಷ್ಠಾವಂತ ಅಹ್ಮದಿ ಸಹ ಅಲ್ಲಿ ಬಂಧನದಲ್ಲಿ ಇದ್ದ ವೇಳೆ ಸರಿಯಾದ ಚಿಕಿತ್ಸೆ ಲಭಿಸದ ಕಾರಣದಿಂದ ಮೃತಪಟ್ಟರು. ಅಲ್ಲಿಂದ ವಿವರಗಳು ಲಭಿಸುವುದು ಪ್ರಯಾಸ. ಹೇಗಿದ್ದರೂ ಕಷ್ಟತೆಗಳಲ್ಲಿ ಸಿಲುಕಿಕೊಂಡಿರುವ ಆ ಜನರಿಗಾಗಿ ದುಆ ಮಾಡಿರಿ. ಇನ್ನಷ್ಟು ವಿವರಗಳು ಲಭಿಸಿದ ನಂತರ ಇನ್‌ಶಾ ಅಲ್ಲಾಹ್ ದಿವಂಗತರ ಜನಾಝ ನಮಾಝ್ ಸಹ ನಿರ್ವಹಿಸುವೆನು.

ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ತಮ್ಮ ರಾಜಕೀಯ ಲಾಭಕ್ಕಾಗಿ ಸದಾ ಅಹ್ಮದಿಯರನ್ನು ಗುರಿಪಡಿಸಲಾಗುತ್ತದೆ. ಅದೇ ರೀತಿಯಲ್ಲಿ ಕೆಲವು ಉಗ್ರಗಾಮಿ ಸಂಘಟನೆಗಳಿಂದಲೂ ಅಹ್ಮದಿಯಾ ಜಮಾಅತಿಗೆ ಅಪಾಯವಿದೆ. ಜಮಾಅತಿನ ಸದಸ್ಯರಿಗೆ ಎಲ್ಲೆಡೆ ದುಪ್ಪಟ್ಟು ಅಪಾಯವಿರುತ್ತದೆ. ಒಂದು ಪ್ರಜೆಯೆಂಬ ನೆಲೆಯಲ್ಲಿ ಮತ್ತೊಂದು ಅಹ್ಮದಿಯೆಂಬ ನೆಲೆಯಲ್ಲಿ. ರಬ್ವಾ ಮತ್ತು ಇತರ ಪಟ್ಟಣಗಳ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ. ದುಷ್ಟರ ಕೆಡುಕುಗಳು ಅವರಿಗೆ ತಿರುಗೇಟಾಗಲಿ. ಅಲ್ಲಾಹನು ಪ್ರತಿಯೊಂದು ದೇಶದಲ್ಲಿ ಅಹ್ಮದಿಯರ ಸಂರಕ್ಷಣೆ ಮಾಡಲಿ. ಅಲ್ಲಾಹನ ಕಡೆಗೆ ಮರಳುವುದಲ್ಲದೇ ಬೇರೆ ಮಾರ್ಗವಿಲ್ಲ, ಅಲ್ಲಾಹನನ್ನು ಅರಿಯಬೇಕು ಮತ್ತು ಅಲ್ಲಾಹನು ಕಳುಹಿಸಿದ ವ್ಯಕ್ತಿಯನ್ನು ನಂಬುವುದರಲ್ಲೇ ರಕ್ಷಣೆ ಇರುವುದು ಎಂಬ ಸತ್ಯತೆಯನ್ನು ಲೋಕ ತಿಳಿಯುವಂತಾಗಲಿ – ಆಮೀನ್

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಈ ಆಯತ್‌ನಲ್ಲಿ ಹೇಳಿರುವುದೆನೆಂದರೆ ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಮಾನವರಿಗೆ ಗೌರವವನ್ನು ನೀಡಿದ್ದಾನೆ ನಿರ್ದಿಷ್ಟ ಸಮೂದಾಯಗಳಿಗೆ ಅಲ್ಲ, ಆದ್ದರಿಂದ ಸಮೂದಾಯಗಳು ಪರಸ್ಪರರ ಬಗ್ಗೆ ಹೆಮ್ಮೆಪಡಬಾರದು. ತಮ್ಮನ್ನು ಇತರರಿಗಿಂತ ಹೆಚ್ಚು ಗೌರವಾನ್ವಿತರು ಎಂದು ಪರಿಗಣಿಸಿದ ಯಹೂದಿಗಳು ಮತ್ತು ಖುರೈಶ್‌ಗಳಿಗೆ ಸಲಹೆ ನೀಡಲಾಗಿದೆ ಮತ್ತು ಸರ್ವಶಕ್ತನಾದ ಅಲ್ಲಾಹನು ಪ್ರತಿ ಸಮೂದಾಯಕ್ಕೂ ಗೌರವವನ್ನು ನೀಡಿದ್ದಾನೆ ಎಂದು ತಿಳಿಸಲಾಗಿದೆ, ಆದರೆ ಕೆಲವು ಸಮೂದಾಯಗಳು ಈ ಗೌರವದಿಂದ ಪ್ರಯೋಜನ ಪಡೆದುಕೊಳ್ಳುವುದಿಲ್ಲ ಮತ್ತು ಸರ್ವಶಕ್ತನಾದ ಅಲ್ಲಾಹನು ತೆರೆದ ಮಾರ್ಗಗಳನ್ನು ತಮ್ಮ ಮೇಲೆ ಬಂದು ಮಾಡಿಕೊಳ್ಳುತ್ತಾರೆ. **ವಹಮಲ್‌ನಾಹುಮ್ ಫಿಲ್ ಬರ್ರಿ ವಲ್ ಬಹರ್** ಎಂದು ಹೇಳುವ ಮೂಲಕ ಮಾನವ ಅಭಿವೃದ್ಧಿಗಾಗಿ ಸಮುದ್ರ ಮತ್ತು ಭೂಮಿಯನ್ನು ಅಲ್ಲಾಹನು ಸಮಾನವಾಗಿ ನೇಮಿಸಿದ್ದಾನೆ ಎಂದು ಸೂಚಿಸಲಾಗಿದೆ. ಆದ್ದರಿಂದ ಒಂದು ಸಮೂದಾಯವು ಗೌರವವನ್ನು ಪಡೆಯಲು ಬಯಸಿದರೆ, ಅದು ಎರಡರಿಂದಲೂ ಸಮಾನವಾಗಿ ಪ್ರಯೋಜನ ಪಡೆಯಬೇಕು.

ಪವಿತ್ರ ಖುರ್‌ಆನ್ ಅನ್ನು ಹಝ್ರತ್ ಪೈಗಂಬರ್(ಸ) ರಚಿಸಿದ್ದಾರೆ ಎಂದು ಜನರು ಹೇಳುತ್ತಾರೆ. ಈ ಸ್ಥಳದಲ್ಲಿ ವಿವರಿಸಲಾದ ಈ ವಿಷಯಗಳು ಅರಬ್ ನಿವಾಸಿಯ ಬಾಯಿಯಿಂದ ಹೊರಬರಬಹುದೇ? ಅದರಲ್ಲೂ ದೋಣಿಯಲ್ಲಿ ಎಂದಿಗೂ ಪ್ರಯಾಣಿಸದವರ ಬಾಯಿಂದ. ದುರದೃಷ್ಟವಶಾತ್, ಕಳೆದ ಕೆಲವು ಶತಮಾನಗಳಿಂದ ಮುಸ್ಲಿಮರು ಈ ಸಲಹೆಯನ್ನು ಮರೆತಿದ್ದಾರೆ ಮತ್ತು ಅವರ ಶಕ್ತಿ ದುರ್ಬಲಗೊಂಡಿದೆ. ಅವರು ಸಮುದ್ರ ನೌಕಾಪಡೆಗಳನ್ನು ಕಾಳಜಿ ವಹಿಸಿದ್ದರೆ, ಇಸ್ಲಾಂ ಈಗಿನಷ್ಟು ದುರ್ಬಲವಾಗುತ್ತಿರಲಿಲ್ಲ.

**ಫಝ್ಝಲ್‌ನಾಹುಮ್ ಅಲಾ ಕಸೀರಿಮ್ಮಿಮ್ಮನ್ ಖಲಖ್‌ನಾ** ನಿಂದ ಕೆಲವು ಜನರು ಮನುಷ್ಯ ಕೆಲವು ರೀತಿಯ ಜೀವಿಗಳಿಗಿಂತ ಶ್ರೇಷ್ಠರು ಎಂದು ವಾದಿಸುತ್ತಾರೆ, ಎಲ್ಲಾ ರೀತಿಯ ಜೀವಿಗಳಲ್ಲ. ಆದರೆ ಈ ತರ್ಕವು ತಪ್ಪಾಗಿದೆ ಏಕೆಂದರೆ ಈ ಸ್ಥಳದಲ್ಲಿ ಬನೀ ಆದಮ್‌ನ ಉಲ್ಲೇಖವು ಒಂದು ಜಮಾಅತ್‌ನ ರೀತಿಯಲ್ಲಿದೆ. ಮತ್ತು ಎಲ್ಲಾ ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮವಾಗಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಕೆಲವು ಮನುಷ್ಯರು ಅತ್ಯಂತ ಕೊಳಕಾಗಿದ್ದಾರೆ ಮತ್ತು ಪ್ರಾಣಿಗಳಿಗಿಂತ ಕೆಟ್ಟವರಾಗಿದ್ದಾರೆ. ಕೆಲವರು ಸ್ವಲ್ಪ ಒಳ್ಳೆಯ ಆತ್ಮಗಳು ಮತ್ತು ಪ್ರಾಣಿಗಳಿಗಿಂತ ಉತ್ತಮರು. ಮತ್ತು ಕೆಲವರು ತುಂಬಾ ಒಳ್ಳೆಯವರು ಮತ್ತು ಸಾಮಾನ್ಯ ದೇವದೂತರುಗಳಿಗಿಂತಲೂ ಉತ್ತಮರು. ಮತ್ತು ಕೆಲವರು ಉನ್ನತ ಸ್ಥಾನದಲ್ಲಿದ್ದಾರೆ ಮತ್ತು ಪ್ರಧಾನ ದೇವದೂತರುಗಳಿಗಿಂತಲೂ ಹೆಚ್ಚಿನವರಾಗಿದ್ದಾರೆ. ಆದ್ದರಿಂದ, ಎಲ್ಲಾ ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮರಲ್ಲ, ಆದರೆ ಕೆಲವು ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮರು, ಮತ್ತು ಮನುಷ್ಯರು ಹೆಚ್ಚಿನ ಜೀವಿಗಳಿಗಿಂತ ಉತ್ತಮರು, ಏಕೆಂದರೆ ಸೂರ್ಯ, ಚಂದ್ರ, ನಕ್ಷತ್ರಗಳು, ಕುದುರೆಗಳು, ಎತ್ತುಗಳು, ಒಂಟೆಗಳು, ಮೇಕೆಗಳು ಎಲ್ಲಾ ಅವಿಶ್ವಾಸಿ ಗಳು ಹಾಗೂ ವಿಶ್ವಾಸಿಗಳು ಎಲ್ಲಾ ಈ ಕೆಲಸವನ್ನು ಮಾಡುತ್ತವೆ. ಎಲ್ಲರಿಗೂ ಸೇವೆ ನೀಡಲಾಗುತ್ತದೆ. ಆದ್ದರಿಂದ, ಮನುಷ್ಯನು ಲೈಂಗಿಕತೆಯ ಹೆಚ್ಚಿನ ಜೀವಿಗಳಿಗಿಂತ ಶ್ರೇಷ್ಠನಾಗಿದ್ದಾನೆ ಮತ್ತು ಪರಿಪೂರ್ಣ ವ್ಯಕ್ತಿಯ ಎಲ್ಲಾ ಜೀವಿಗಳಿಗಿಂತ ಮನುಷ್ಯನು ಶ್ರೇಷ್ಠನಾಗಿದ್ದಾನೆ. **(ತಫ್ಸೀರ್ ಕಬೀರ್, ಸಂಪುಟ 4, ಪುಟ 365, ಮುದ್ರಣ ಖಾದಿಯಾನ್, 2010)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

## ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

**"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"**
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

### "ನಝಾರತ್ ತಅ್‌ಲೀಮ್" (ಶಿಕ್ಷಣ ಇಲಾಖೆ) ನ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಪುರುಷ ಶಿಕ್ಷಕರ ಅಗತ್ಯವಿದೆ.

ತಾಲೀಮುಲ್ ಇಸ್ಲಾಮ್ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ದೈಹಿಕ ಶಿಕ್ಷಣ ಮತ್ತು ಕಂಪ್ಯೂಟರ್ ಶಿಕ್ಷಕರ ಕೆಲವು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಸೇವಾ ಮನೋಭಾವ ಮತ್ತು ಅಗತ್ಯ ಶೈಕ್ಷಣಿಕ ಅರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ನಝಾರತ್ ದೀವಾನ್ ಪ್ರಕಟಿಸಿದ ಮಾಹಿತಿ ನಮೂನೆಯನ್ನು ಭರ್ತಿ ಮಾಡುವ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು. ವಿವರಣೆ ಮತ್ತು ಷರತ್ತುಗಳು ಈ ಕೆಳಗಿನಂತಿವೆ.

**ಕಂಪ್ಯೂಟರ್ ಟೀಚರ್**

(1) ವಿದ್ಯಾರ್ಹತೆ : BCA/B.Sc(IT/CS/Internet Science), B.Tech (IT/CS)

(2) ಅಭ್ಯರ್ಥಿಯು ಉರ್ದು, ಇಂಗ್ಲಿಷ್, ಹಿಂದಿ ಮತ್ತು ಪಂಜಾಬಿ ಟೈಪಿಂಗ್ ತಿಳಿದಿರಬೇಕು. (3) ಸಂಬಂಧಿತ ವಿಷಯದಲ್ಲಿ ಪದವಿ (BCA/ B.Sc, B.Tech) ಜೊತೆಗೆ 55%, ಮತ್ತು ಯಾವುದೇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 3 ವರ್ಷಗಳ ಅನುಭವ, ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುತ್ತದೆ.

**ದೈಹಿಕ ಶಿಕ್ಷಣ ಶಿಕ್ಷಕ**

(1) ದೈಹಿಕ ಶಿಕ್ಷಣವನ್ನು ಐಚ್ಚಿಕ ವಿಷಯವಾಗಿ ಬಿ.ಎ / ದೈಹಿಕ ಶಿಕ್ಷಣದಲ್ಲಿ 3 ವರ್ಷದ ಪದವಿ ಕೋರ್ಸ್ ಮತ್ತು ಬಿ.ಪಿ.ಎಡ್.

(2) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಬ್ಯಾಚುಲರ್ ಆಫ್ ಫಿಸಿಕಲ್ ಎಜುಕೇಶನ್‌ನ 4 ವರ್ಷಗಳ ಸಮಗ್ರ ಕೋರ್ಸ್.

(3) ಸಂಬಂಧಪಟ್ಟ ವಿಷಯದಲ್ಲಿ 55% ಅಂಕಗಳು ಮತ್ತು ಯಾವುದೇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 3 ವರ್ಷಗಳ ಅನುಭವ ಇರಬೇಕು. ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು. (4) ಅಭ್ಯರ್ಥಿಯ ವಯಸ್ಸು 20 ವರ್ಷಗಳಿಗಿಂತ ಕಡಿಮೆ ಮತ್ತು 40 ವರ್ಷಗಳಿಗಿಂತ ಹೆಚ್ಚಾಗಿರಬಾರದು. ಅಸಾಧಾರಣ ಸಂದರ್ಭಗಳಲ್ಲಿ ವಯಸ್ಸಿನ ಮಿತಿಯ ಸಡಿಲಿಕೆಯನ್ನು ಪರಿಗಣಿಸಬಹುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ, ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ. (7) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಾಗಿರುತ್ತದೆ. (8) ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು (9) ಮುದ್ರಿತ ಮಾಹಿತಿ ನಮೂನೆಯನ್ನು ನಝಾರತ್ ದೀವಾನ್ ಅಥವಾ ಕೆಳಗಿನ ವಿಳಾಸದಿಂದ / E-mail ಮೂಲಕ ಪಡೆಯಬಹುದು. (10) ಶೈಕ್ಷಣಿಕ ಅರ್ಹತೆಗಳ ಅರ್ಜಿಗಳು ಹಾಗೂ ಅನುಭವದ ಯೋಗ್ಯತಾಪತ್ರಗಳ ನಮೂನೆಗಳೊಂದಿಗೆ ನಝಾರತ್ ದೀವಾನ್‌ನ ಈ ಜಾಹಿರಾತಿನ ನಂತರ ಎರಡು ತಿಂಗಳ ಒಳಗೆ ಕಳುಹಿಸತಕ್ಕದ್ದು. (11) ಜೀವನ ಭತ್ಯೆ ಮತ್ತು ಇತರ ಮಾಹಿತಿಗಾಗಿ, ಈ ಕೆಳಗಿನ E-mail ಮತ್ತು ಫೋನ್ ಸಂಖ್ಯೆಗಳನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಡ್ರೈವಿಂಗ್ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

**ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್–143516**
**ಮೊಬೈಲ್: 09682627592, 09682587713,**
**ಕಛೇರಿ: 01872–501130. ಇ–ಮೇಲ್:**
**diwan@qadian.in**

ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನಲ್ಲಿ ಡ್ರೈವರ್ ವೃತ್ತಿಗೆ ಘೋಷಣೆ

**ಷರತ್ತುಗಳು:**

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಗಳಿಗಿಂತ ಕಡಿಮೆಯಿರಬೇಕು. (2) ಅಭ್ಯರ್ಥಿಯು ಕನಿಷ್ಠ 8 ನೇ ತರಗತಿಯಿಂದ ತೇರ್ಗಡೆ ಹೊಂದಿರಬೇಕು (3) ಅಭ್ಯರ್ಥಿಯು ಕನಿಷ್ಠ 10 ವರ್ಷಗಳ ಮಾನ್ಯ ಚಾಲನಾ ಪರವಾನಗಿ ಮತ್ತು 10 ವರ್ಷಗಳ ಚಾಲನಾ ಅನುಭವವನ್ನು ಹೊಂದಿರಬೇಕು. ಪ್ರವೃತ್ತಿ ಚಾಲಕನಿಗೆ ಆದ್ಯತೆ ನೀಡಲಾಗುತ್ತದೆ (4) ಅಭ್ಯರ್ಥಿ ಚಾಲಕನಿಗೆ ಎರಡನೇ ದರಜೆಯ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುತ್ತದೆ (5) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಿಂದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ ಮತ್ತು (6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಡ್ರೈವಿಂಗ್ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

**ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್–143516**
**ಮೊಬೈಲ್: 09682627592, 09682587713,**
**ಕಛೇರಿ: 01872–501130. ಇ–ಮೇಲ್:**
**diwan@qadian.in**

### ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

### ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." ***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

*(ಬದರ್ ಸಂಚಿಕೆ–09ರ ಪುಟ–12ರ ಉಳಿದ ಭಾಗ ಮುಂದುವರಿಸಲಾಗಿದೆ)*

ನಮಾಝಿನ ನಂತರ, ಎರಡು ಜನಾಝ ಗ಼ಾಯಿಬ್‌ಗಳನ್ನು ನಿರ್ವಹಿಸುತ್ತೇನೆ.

ಅವರಲ್ಲಿ ಮೊದಲ ಪ್ರಸ್ತಾಪ ಮುಕರ್‍ರಮ್ ಹಾಫಿಝ್ ಡಾಕ್ಟರ್ ಅಬ್ದುಲ್ ಹಮೀದ್ ಗಾಮಾಂಗಾ ಸಾಹಿಬ್ ಸೆರಾ ಲಿಯೋನ್ ನ ನೈಬ್ ಅಮೀರ್ ಆಗಿದ್ದಾರೆ ಅವರದ್ದಾಗಿದೆ. ಅವರು ಅಲ್ಪಕಾಲದ ಅನಾರೋಗ್ಯದ ನಂತರ ಜನವರಿ 13 ರಂದು ನಲವತ್ತೈದನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು.

ಸೆರಾಲಿಯೋನ್‌ನ ಅಮೀರ್ ಜಮಾಅತ್ ಮೂಸಾ ಮೇಹ್ ಸಾಹಿಬ್ ಬರೆಯುತ್ತಾರೆ: ಡಾ. ಗಮಾಂಗ ಸಾಹಿಬ್ ಅವರು ಸೆರಾ ಲಿಯೋನ್‌ನಲ್ಲಿ ಅತ್ಯಂತ ಉದಾರ ದಾನಿಯಾಗಿದ್ದರು. ಹೊಸ ಜಲ್ಸಾ ಸಭಾಂಗಣಕ್ಕಾಗಿ ಸ್ಥಳವನ್ನು ಖರೀದಿಸಿ ಅದಕ್ಕೆ ಆರ್ಥಿಕ ನೆರವು ನೀಡುವಂತೆ ನಾನು ಜನರಲ್ಲಿ ಮನವಿ ಮಾಡಿದಾಗ, ಡಾ. ಸಾಹಿಬ್ ಅತ್ಯಧಿಕ ಮೊತ್ತವನ್ನು ಪಾವತಿಸಲು ವಾಗ್ದಾನ ನೀಡಿದರು ಮತ್ತು ನಿಶಿನ ಹೊಂದುವ ಮೊದಲು ಹತ್ತು ಸಾವಿರ ಯುಎಸ್ ಡಾಲರ್‌ಗಳನ್ನು ಚಂದವಾಗಿ ನೀಡಿದರು. ಡಾ. ಸಾಹಿಬ್ ನುಸ್ರತ್ ಜಹಾನ್ ಯೋಜನೆಯಡಿ ಐದು ವರ್ಷ ವಖ್ಫ್ ಮಾಡಿದ್ದರು. ಅವರನ್ನು ನೈಜೀರಿಯಾದಲ್ಲಿ ನೇಮಿಸಲಾಯಿತು ಆದರೆ ಇನ್ನೂ ಪ್ರಕ್ರಿಯೆಗೊಳಿಸಲಾಗುತ್ತಿದೆ. ಡಾಕ್ಯುಮೆಂಟ್ಸ್‌ಗಳು ಪೂರ್ಣಗೊಂಡಿಲ್ಲ. ಈ ಅವಧಿಯಲ್ಲಿ, ನಮ್ಮ ಪಾಕಿಸ್ತಾನಿ ವೈದ್ಯರ ನಿರ್ಗಮನದಿಂದಾಗಿ, ಅವರು ಫ್ರೀಟೌನ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು ಮತ್ತು ಅಲ್ಲಿ ಬಹಳ ಶ್ರಮಿಸಿದರು. ಹಾಗೂ ಈ ಅವಧಿಯಲ್ಲಿ ತಮ್ಮ ಪಾಲಿನ ಆಸ್ಪತ್ರೆಯಿಂದ ಬಂದ ಹಣವನ್ನೆಲ್ಲ ಆಸ್ಪತ್ರೆಗೆ ಚಂದವಾಗಿ ನೀಡಿ ಆಸ್ಪತ್ರೆಯ ನವೀಕರಣ ಕಾರ್ಯವನ್ನು ಮಾಡಿದರು. ಈ ಮೊತ್ತವು ಸ್ಥಳೀಯ ಕರೆನ್ಸಿಯಲ್ಲಿ 200,000 ಲಿಯೋನ್ ಆಗಿತ್ತು. ಖಿಲಾಫತ್‌ನೊಂದಿಗೆ ಅಪಾರ ಪ್ರೀಯನ್ನಿರಿಸಿಕೊಂಡಿದ್ದರು. ಅವರು ಪಶ್ಚಾತ್ತಾಪ ಪಡುವ ಅವರ ಜೀವನದ ದೊಡ್ಡ ವಿಷಾದವೆಂದರೆ ಅವರು ಖಲೀಫ ಡಖ್ತ್ ಅವರನ್ನು (ಖಲೀಫರನ್ನು) ಭೇಟಿಯಾಗಲು ಸಾಧ್ಯವಾಗಲಿಲ್ಲ. ಅವರು ನನ್ನನ್ನು ಭೇಟಿ ಮಾಡಲು ಎರಡು ಬಾರಿ ಪ್ರಯತ್ನಿಸಿದರು, ಆದರೆ ಅವರಿಗೆ ವೀಸಾ ಸಿಗಲಿಲ್ಲ. ವೈದ್ಯಕೀಯ ಸೇವೆಯ ಸಂದರ್ಭದಲ್ಲಿ ನಿರ್ಗತಿಕ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು. ಪೋಷಕರು ತಮ್ಮ ಕಾಲೇಜು ಶುಲ್ಕವನ್ನು ಭರಿಸಲಾಗದ ಅನೇಕ ಅಹ್ಮದಿ ವಿದ್ಯಾರ್ಥಿಗಳಿಗೆ ಡಾ. ಸಾಹಿಬ್ ಸಹಾಯ ಮಾಡಿದರು. ಅವರು ತುಂಬಾ ಪ್ರಾಮಾಣಿಕ, ಕಠಿಣ ಪರಿಶ್ರಮವಹಿಸುವವರು ಮತ್ತು ಇತರರಿಗೆ ಸಹಾಯಕರಾಗಿದ್ದರು. ಅವರು ಇಲ್ಲಿರುವ ಟೋಮಿ ಕಾಲೋನ್ ಸಾಹಿಬ್ ಅವರ ಕಿರಿಯ ಸಹೋದರಿ ಕಾದಿ ಯಟ್ಟಾ ಗಮಾಂಗ ಅವರನ್ನು ವಿವಾಹವಾದರು. ಅವರಿಗೆ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ಒಬ್ಬ ಮಗಳಿಗೆ ಸುಮಾರು ನಾಲ್ಕು ವರ್ಷ ಮತ್ತು ಮಗನಿಗೆ ಎರಡು ವರ್ಷ.

ಅಲ್ಲಿನ ಮುರಬ್ಬಿ ಸೀದುಲ್ ಹಸನ್ ಸಾಹಿಬ್ ಹೇಳುತ್ತಾರೆ: ನನಗೆ ವೈಯಕ್ತಿಕವಾಗಿ ತಿಳಿದಿರುವ ಹಲವು ವಿಶೇಷ ಗುಣಗಳು ಅವರಲ್ಲಿದ್ದವು. ಮೂಸಾ ಮಯೋಹ್ ಸಾಹಿಬ್ ಹೊಸದಾಗಿ ಅಮೀರ್ ಆಗಿದ್ದಾಗ, ಡಾ. ಗಮಾಂಗ ಸಾಹಿಬ್ ಅವರ ತಂಡದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಕೀನ್ಯಾದಲ್ಲಿ ಸ್ತ್ರೀರೋಗ ಶಾಸ್ತ್ರದಲ್ಲಿ ವಿಶೇಷ ಪದವಿಯೊಂದಿಗೆ ಸೆರಾ ಲಿಯೋನ್‌ಗೆ ಬಂದರು. ದಣಿವರಿಯದೆ ದುಡಿದದ್ದು ಅವರ ಒಂದು ಗುಣವಾಗಿದೆ. ಹಗಲಿರುಳು ದುಡಿದು ಹೆಂಡತಿ ಮಕ್ಕಳು ತನಗಾಗಿ ಕಾಯುತ್ತಿರುತ್ತಾರೆ ಎಂಬುದನ್ನು ಮರೆತಿದ್ದರು. ಅವರು ಪವಿತ್ರ ಖುರ್‌ಆನ್‌ನ ಹಾಫಿಝ್ ಕೂಡ ಆಗಿದ್ದರು ಮತ್ತು ಅದನ್ನು ಸುಂದರವಾದ ಸ್ವರಗಳಲ್ಲಿ ಪಠಿಸುತ್ತಿದ್ದರು. ಕಳೆದ ರಂಜಾನ್‌ನಲ್ಲಿ ಅವರು ತರಾವೀಹ್ ನಮಾಝನ್ನು ಕೇಂದ್ರ ಕಚೇರಿಯಲ್ಲಿ ನಿರ್ವಹಿಸಿದರು ಮತ್ತು ಜನರು ಅದನ್ನು ತುಂಬಾ ಆನಂದಿಸಿದರು ಎಂದು ಹೇಳಲಾಗುತ್ತದೆ. ವಿನಯವು ಡಾ. ಸಾಹಿಬ್ ಅವರ ಪ್ರಮುಖ ಲಕ್ಷಣವಾಗಿತ್ತು. ಸದಾ ನಗುವ ಮುಖದಿಂದ ಭೇಟಿಯಾಗಿ ತಮ್ಮ ಅನಾರೋಗ್ಯ ಮತ್ತು ನೋವನ್ನು ಮರೆಮಾಚುತ್ತಿದ್ದರು.

ಸಫೀರ್ ಆಹ್ಮದ್ ಸಾಹಿಬ್ ಮುರಬ್ಬಿ ಆಗಿದ್ದಾರೆ ಅವರು ಹೇಳುತ್ತಾರೆ: ಡಾ. ಸಾಹಿಬರು ಹಲವು ಗುಣಗಳ ಒಡೆಯರಾಗಿದ್ದರು. ಅವರು ತಮ್ಮ ಕ್ಷೇತ್ರದಲ್ಲಿ ಉತ್ತಮ ಹೆಸರು ಹೊಂದಿದ್ದರು. ಅಲ್ಲಾಹನು ನಿಮ್ಮ ಕೈಯಲ್ಲಿ ಶಿಫಾ (ಫಲಕಾರಿ ಚಿಕಿತ್ಸೆ) ನೀಡಿದ್ದನೆ. ಚಿಕಿತ್ಸೆಗಾಗಿ ಜನರು ಅವರ ಬಳಿಗೆ ಬರುತ್ತಿದ್ದರು. ದೈಹಿಕ ಚಿಕಿತ್ಸೆಯ ಜೊತೆಗೆ, ನೀವು ಅವರಿಗೆ ಆಧ್ಯಾತ್ಮಿಕವಾಗಿಯೂ ಚಿಕಿತ್ಸೆ ನೀಡುತ್ತಿದ್ದರು ಮತ್ತು ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಬೋಧನೆಗಳ ಬಗ್ಗೆ ಅವರಿಗೆ ತಿಳಿಸುತ್ತೀರಿ. ದಿವಂಗತರು ಉಪವಾಸ ಅನುಷ್ಠಾನ ಮತ್ತು ತಹಜ್ಜುದ್ ನಮಾಝ್ ನಿಯಮಿತವಾಗಿ ನಿರ್ವಹಿಸುವವರಾಗಿದ್ದರು. ಸಮಯಕ್ಕೆ ಸರಿಯಾಗಿ ಚಂದಗಳನ್ನು ಪಾವತಿಸುತ್ತಿದ್ದರು. ಜಮಾಅತ್ತಿನ ಕೆಲಸಕ್ಕಾಗಿ ಸಾಂಸಾರಿಕ ಕೆಲಸ ಬಿಟ್ಟು ಜಮಾಅತ್ತಿನ ಧ್ವನಿಗೆ ತಕ್ಷಣ ಸ್ಪಂದಿಸುತ್ತಿದ್ದರು. ಜಮಾಅತ್ತಿನ ಹುದ್ದೆದಾರರನ್ನು ಮತ್ತು ಮುರಬ್ಬಿಗಳನ್ನು ತುಂಬಾ ಗೌರವಿಸುತ್ತಿದ್ದರು. ಅವರು ಜುಮುಅ ನಮಾಝ್‌ಗೆ ವಿಶೇಷ ವ್ಯವಸ್ಥೆಗಳನ್ನು ಮಾಡುತ್ತಿದ್ದರು ಮತ್ತು ಎಲ್ಲಾ ಬದ್ಧತೆಗಳನ್ನು ತೊರೆದು ಜುಮುಅ ನಮಾಝ್ ನಿರ್ವಹಿಸಲು ಪೋರ್ಟ್ ಲೋಕೋವಿನ ಮಸೀದಿಗೆ ಬರುತ್ತಿದ್ದರು.

ಅಬ್ದುಲ್‌ಹೈ ಕ್ರೋಮ ಸಾಹಿಬ್ ದ್ವಿತೀಯ ಉಪ ಅಮೀರ್ ಹೇಳುತ್ತಾರೆ: ಸೆರಾ ಲಿಯೋನ್‌ನ ಸ್ಥಳೀಯ ಭಾಷೆಯಾದ ಮೆಂಡೆಯಲ್ಲಿನ ಪವಿತ್ರ ಖುರ್‌ಆನ್ ಭಾಷಾಂತರ ಸಮಿತಿಯಲ್ಲಿ ಡಾ. ಗಮಾಂಗ ಕೂಡ ಸದಸ್ಯರಾಗಿದ್ದರು. ದಿನದ ಐದು ಹೊತ್ತಿನ ನಮಾಝ್ ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ನಿಜವಾದ ಅರ್ಥದಲ್ಲಿ ಅವರು ವಖಿಫೆ ಝಿಂದಗಿ ಆಗಿದ್ದರು. ಸರಕಾರದ ಕರ್ತವ್ಯದ ನಂತರ ಅವರು ಅಹ್ಮದಿಯಾ ಆಸ್ಪತ್ರೆಗೆ ಹೋಗುತ್ತಿದ್ದರು. ಅಲ್ಲಿ ಸಂಜೆಯವರೆಗೂ ಕೆಲಸ ಮಾಡಿ ನಂತರ ಮಿಷನ್ ಹೌಸ್ ಗೆ ಭೇಟಿ ನೀಡುತ್ತಿದ್ದರು. ಅವರು ತಡರಾತ್ರಿಯವರೆಗೆ ಕೆಲಸ ಮಾಡಿದ ನಂತರ ಮನೆಗೆ ತೆರಳುತ್ತಿದ್ದರು. ಸಾಮಾನ್ಯವಾಗಿ ಅವರಿಗೆ ನಿಜವಾದ ಕನಸ್ಸುಗಳು ಬರುತ್ತಿದ್ದವು ಮತ್ತು ಅದರ ಸತ್ಯವೂ ಬಹಿರಂಗಗೊಳ್ಳುತ್ತಿತ್ತು. ಅವರು ಹೇಳುತ್ತಾರೆ: ಖಲೀಫ ವಕ್ತ್ ರವರ ಸೂಚನೆಯಂತೆ ಜಮಾಅತ್‌ಗೆ ಹತ್ತು ವರ್ಷಗಳ ಶೈಕ್ಷಣಿಕ ಯೋಜನೆಯನ್ನು ರೂಪಿಸಿ, ಮುಂದೆ ಜಮಾಅತ್ ಗೆ ಹಲವು ಕಾರ್ಯಕರ್ತರು ಲಭ್ಯವಾಗುವಂತೆ ಮಾಡಿದರು. ಇವರು ಮುಂದೆ ಹೇಳುತ್ತಾರೆ: ವಿನೀತನಿಗೆ ಉಪ ಎಮಿರ್ ಆಗಿ ಅವರೊಂದಿಗೆ ನಿಕಟ ಸಂಬಂಧ ಹೊಂದಿದ್ದೆ. ಜಮಾಅತ್ತಿನ ಮೇಲಿನ ಪ್ರೀತಿ ಮತ್ತು ಅಲ್ಲಾಹನ ಹಕ್ಕುಗಳ ಈಡೇರುವಿಕೆ ಮತ್ತು ದಾಸರ ಹಕ್ಕುಗಳು, ಔದಾರ್ಯ, ನಮ್ರತೆ, ಆರ್ಥಿಕ ತ್ಯಾಗ ಅನೇಕ ಒಳ್ಳೆಯ ವಿಷಯಗಳು ಅಭ್ಯಾಸಗಳು ಅವರಲ್ಲಿದ್ದವು.

ಅಲ್–ಮಾಮಿ ಸೇಸೆ ಸಾಹಿಬ್ ಹೇಳುತ್ತಾರೆ: ಅವರು 1989 ರಲ್ಲಿ ಜಮಿಯತ್ ಅಲ್–ಮುಬಶ್ಶಿರೀನ್ ಸೆರಾ ಲಿಯೋನ್ ಅನ್ನು ಪ್ರವೇಶಿಸಿದರು. 91 ರಲ್ಲಿ ಅಧ್ಯಯನವನ್ನು ಪೂರ್ಣಗೊಳಿಸಿದರು. ಅಧ್ಯಯನದಲ್ಲಿ ಉತ್ತಮ ಅಂಕಗಳನ್ನು ಪಡೆದರು. ಯಾವಾಗಲೂ ಉನ್ನತ ಅಂಕಗಳೊಂದಿಗೆ ತೇರ್ಗಡೆಯಾಗುತ್ತಿದ್ದರು. ಅವರು ಮೊದಲು ನೇಮಕಗೊಂಡ ಪವಿತ್ರ ಖುರ್‌ಆನ್ ಅನ್ನು ಕಂಠಪಾಠ ಮಾಡಲು ಪ್ರಾರಂಭಿಸಿದರು. ಅವರು ಪವಿತ್ರ ಖುರ್‌ಆನ್ ಅನ್ನು ಸ್ವತಃ ಕಂಠಪಾಠ ಮಾಡಿದರು. ನಂತರ ಅಂತರ್ಯುದ್ಧ ಸಂಭವಿಸಿತು. ಸೆರಾ ಲಿಯೋನ್‌ಗೆ ನಿಯೋಜಿಸಲಾದ ಎಲ್ಲಾ ಪಾಕಿಸ್ತಾನಿ ಮಿಷನರಿಗಳು ಹೊರಡಬೇಕಾಯಿತು. ನಂತರ ವೈದ್ಯರು ಫ್ರೀಟೌನ್‌ಗೆ ಬಂದರು. ಮಿಷನರಿಗಳು ಕೆಲಸ ಮುಂದುವರೆಸಿದರು. ಈ ಅವಧಿಯಲ್ಲಿ ಅವರು ಉಪ ಅಮೀರ್ ಕೂಡ ಆಗಿದ್ದರು. ಇಲ್ಲಿ ಸೆರಾ ಲಿಯೋನ್ ಜಮಾಅತ್ತಿಗಾಗಿ ಕೇಂದ್ರದಿಂದ ಕೆಲವು ಸರಬರಾಜುಗಳನ್ನು ಕಳುಹಿಸಲಾಯಿತು. ಬಂಡುಕೋರರಿಗೆ ಇದರ ಬಗ್ಗೆ ತಿಳಿದಾಗ, ಅವರು ಮಿಷನ್ ಹೌಸ್ ಮೇಲೆ ದಾಳಿ ಮಾಡಿದರು. ಆದಾಗ್ಯೂ, ಈ ಜನರು ಛಾವಣಿಯ ಮೇಲಿನ ಸೀಲಿಂಗ್ನಲ್ಲಿ ಅಡಗಿಕೊಂಡರು. ಅವರಲ್ಲಿ ಒಬ್ಬರು ಈ ವರದಿ ಮಾಡುತ್ತಿರುವವರು ಅವರು, ಅವರ ಆ ಬಂಡುಕೋರರ ಕೈಯಲ್ಲಿ ಸಿಕ್ಕಿಬಿದ್ದರು. ಆ ಬಂಡುಕೋರರು ಅವರ ತಲೆಯ ಮೇಲೆ ಬಂದೂಕು ಇಟ್ಟುಕೊಂಡು ನಿನ್ನನ್ನು ಸಾಯಿಸುತ್ತೇವೆ, ಅಂಗಡಿಯ ಕೀ ಕೊಡು ಎಂದು ಹೇಳಿದನು. ಆದ್ದರಿಂದ ಪರಿಸ್ಥಿತಿ ನಿಜವಾಗಿಯೂ ಅಪಾಯಕಾರಿಯಾಗಿದೆ ಎಂದು ನೋಡಿದಾಗ, ಡಾಕ್ಟರ್ ಗಮಂಗ ಸಾಹಿಬ್ ಕೀಗಳನ್ನು ಹೊಂದಿದ್ದರು, ಅವರು ತಕ್ಷಣ ಕೆಳಗಿಳಿದು ಕೀಗಳನ್ನು ನೀಡಿದರು. ಆದಾಗ್ಯೂ, ಅವರು ಸ್ವಲ್ಪ ಮಟ್ಟಿಗೆ ಸಾಮಾನುಗಳನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹೋದರು.

ಖಾಲಿದ್ ಮಹಮೂದ್ ಸಾಹಿಬ್ ಬರೆಯುತ್ತಾರೆ: ಡಾ. ಸಾಹಿಬ್ ಅವರು ಖಿಲಾಫತ್‌ಗೆ ಬಹಳ ಪ್ರೀತಿ ಮತ್ತು ಪ್ರಾಮಾಣಿಕತೆಯಿಂದ ಸಂಬಂಧ ಹೊಂದಿದ್ದರು. ಅವರು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಎಲ್ಲರನ್ನೂ ತುಂಬಾ ಗೌರವಿಸುತ್ತಿದ್ದರು. ಎಲ್ಲರನ್ನೂ ಬಹಳ ಗೌರವದಿಂದ ಕಾಣುತ್ತಿದ್ದರು. ಜಮಾಅತ್ತಿನ ಅಭಿವೃದ್ಧಿಗೆ ಯಾರಾದರೂ ಸಲಹೆ ನೀಡಿದರೆ ತಕ್ಷಣ ಅದನ್ನು ಸ್ವೀಕರಿಸುತ್ತಿದ್ದರು. ಜಮಾಅತ್ ನ ಅಭಿವೃದ್ಧಿಗೆ ಸದಾ ಶ್ರಮಿಸುವ ಪ್ರಾಮಾಣಿಕರು ಜಮಾಅತ್ ನಲ್ಲಿ ಇರಬೇಕು ಎನ್ನುತ್ತಿದ್ದರು. ತದನಂತರ ಅವರು ಹೇಳುತ್ತಾರೆ ತಪ್ಪಿಗೆ ತಪ್ಪು ಮತ್ತು ಸರಿಗೆ ಸರಿ ಎಂದು ಹೇಳುವ ಕೆಲವೇ ಜನರನ್ನು ನಾವು ನೋಡಿದ್ದೇವೆ. ಡಾ. ಸಾಹಿಬ್ ನಿರ್ಭೀತ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಮಾತನಾಡುವ ರೀತಿ ತುಂಬಾ

ಸುಂದರವಾಗಿತ್ತು. ಎಲ್ಲರೊಂದಿಗೆ ಮೃದು ಸ್ವರದಲ್ಲಿ ಮಾತನಾಡುತ್ತಿದ್ದರು. ಎಲ್ಲ ಕೆಲಸ ಬಿಟ್ಟು ನಮಾಝ್ ನಿರ್ವಹಿಸುತ್ತಿದ್ದರು. ಯಾರಾದರೂ ಕಠೋರವಾಗಿ ಮಾತನಾಡಿದರೆ, ಅವರು ತುಂಬಾ ಮೃದುವಾದ ಧ್ವನಿಯಲ್ಲಿ ಪ್ರತಿಕ್ರಿಯಿಸುತ್ತಿದ್ದರು ಮತ್ತು ಒಬ್ಬ ಅಹ್ಮದಿಯನ್ನು ಹೀಗೆ ಕಟುವಾಗಿ ಮಾತನಾಡಬಾರದು ಎಂದು ಹೇಳುತ್ತಿದ್ದರು.

ಲಜ್ನಾ ಇಮಾಅಲ್ಲಾ ಯುಕೆ ಸೆರಾ ಲಿಯೋನ್‌ನಲ್ಲಿ ತನ್ನದೇ ಆದ ಹೆರಿಗೆ ಆಸ್ಪತ್ರೆಯನ್ನು ನಿರ್ಮಿಸುತ್ತಿದೆ. ಅಲ್ಲಾಹನ ಅನುಗ್ರಹದಿಂದ ಇದೊಂದು ಮಹತ್ತರವಾದ ಯೋಜನೆಯಾಗಿದೆ. ಪರಿಷತ್ತಿನ ಮಾಜಿ ಅಧ್ಯಕ್ಷೆ ಡಾ.ಫರೀಹಾಳನ್ನು ನೋಡಲು ಹೋದರು. ಅವರು ಹೇಳುತ್ತಾರೆ: ಅವರು ಜನರನ್ನು ತುಂಬಾ ಉಪಯೋಜಕ ವ್ಯಕ್ತಿಯಾಗಿದ್ದನ್ನು ನಾನು ನೋಡಿದೆ. ಲಜ್ನಾದ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಲು ಹೋದಾಗ ಅವರು ಡಾ. ಸಾಹಿಬ್ ಅವರು ಲಜ್ನಾ ಆಸ್ಪತ್ರೆಗೆ ಸಂಬಂಧಿಸಿದಂತೆ ಬಹಳ ಅಮೂಲ್ಯವಾದ ಸಲಹೆಯನ್ನು ನೀಡಿದರು. ಬಳಿಕ ತಮ್ಮ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರು. ಮಾನವೀಯತೆಯ ಸೇವೆ ಮಾಡುವ ಅವರ ಉತ್ಸಾಹ ನನ್ನನ್ನು ತುಂಬಾ ಪ್ರಭಾವಿಸಿತು. ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ, ಹಲವಾರು ರೋಗಿಗಳು ಅವರ ಬಳಿಗೆ ಬಂದರು, ಆದರೆ ಅವರ ಮುಖದಲ್ಲಿ ನಗು ಮತ್ತು ಸಹಾನುಭೂತಿಯ ಹೊರತಾಗಿ ಬೇರೇನೂ ಇರಲಿಲ್ಲ, ನನ್ನ ಬಡ ದೇಶದ ಬಡ ನಾಗರಿಕರಿಗೆ ನಾನು ಸಹಾಯ ಮಾಡಬೇಕು. ಆದಾಗ್ಯೂ, ಹೆರಿಗೆ ಆಸ್ಪತ್ರೆ ನಿರ್ಮಿಸಲಾದ ನಂತರ ಅಲ್ಲಿ ಅವರಿಗೆ ನಿಯೋಜಿಸಬೇಕು ಎಂದು ಯೋಚಿಸಿದರು ಆದರೆ ಅಲ್ಲಾಹನ ತನ್ನದೇ ಆದ ಕಾರ್ಯಗಳನ್ನು ಹೊಂದಿದ್ದಾನೆ.

ಅವರ ಪತ್ನಿ ಕಾದಿ ಯಟ್ಟಾ ಸಾಹಿಬಾ ಹೇಳುತ್ತಾರೆ: ನನ್ನ ಪತಿ ಪ್ರಾಮಾಣಿಕ ಮತ್ತು ನಿಷ್ಠಾವಂತ ಅಹ್ಮದಿ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಯಾವಾಗಲೂ ತಮ್ಮ ವೈಯಕ್ತಿಕ ವ್ಯವಹಾರಗಳಿಗಿಂತ ಜಮಾಅತ್ತಿಗೆ ಆದ್ಯತೆ ನೀಡುತ್ತಿದ್ದರು, ಅವರು ಚಿಕಿತ್ಸೆಗಾಗಿ ಸೆನೆಗಲ್‌ಗೆ ಹೋಗಿದ್ದರು, ಅವರು ಸೆನೆಗಲ್‌ಗೆ ಹೋಗುವ ಮೊದಲು, ನನಗೆ ಹೇಳಿದರು: ನಮ್ಮ ನಂಬಿಕೆ ಮತ್ತು ವಿಶ್ವಾಸ ಸರ್ವಶಕ್ತನಾದ ಅಲ್ಲಾನಲ್ಲಿದೆ ಮತ್ತು ಇದೆ ನಮಗಾಗಿದೆ. ಆದ್ದರಿಂದ ಏನೇ ಸಂಭವಿಸಿದರೂ ನೀನು ಚಿಂತಿಸಬೇಕಾಗಿಲ್ಲ. ಅವರು ತಮ್ಮ ರೋಗಿಗಳಿಗೆ ಮತ್ತು ವಿಶೇಷವಾಗಿ ಅಹ್ಮದೀಯರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು ಮತ್ತು ಅವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು ಎಂದು ಅವರು ಹೇಳುತ್ತಾರೆ. ಮತ್ತು ನನ್ನ ಪತಿ ಮರಣದ ನಂತರ ನಾನು ಅನೇಕ ಸದ್ಗುಣಗಳನ್ನು ತಿಳಿದಿದ್ದೇನೆ ಎಂದು ಅವರು ಹೇಳುತ್ತಾರೆ. ಜನರು ಹೇಳಿದರು. ಅವರು ಹೇಳುತ್ತಾರೆ, ಅವರು ನಿಯಮಿತವಾಗಿ ದಿನದ ಐದು ಹೊತ್ತಿನ ನಮಾಝ್ ಅನ್ನು ನಿರ್ವಹಿಸುತ್ತಿದ್ದರು, ತಹಜ್ಜುದ್ ಅನ್ನು ನಿರ್ವಹಿಸುತ್ತಿದ್ದನು ಮತ್ತು ಕಡ್ಡಾಯವಾಗಿ ಅವರು ತಮ್ಮ ಆದಾಯದ ಪ್ರಕಾರ ವಸಿಯ್ಯತ್ ಚಂದವನ್ನು ನಿಡುತ್ತಿದ್ದರು. ಪ್ರತಿ ವರ್ಷ ರಂಜಾನ್ ತಿಂಗಳಲ್ಲಿ, ಅವರು ಪವಿತ್ರ ಖುರ್‌ಆನ್‌ನ ಕನಿಷ್ಠ ಒಂದು ದೌರ ಪೂರ್ಣಗೊಳಿಸುತ್ತಿದ್ದರು ಮತ್ತು ಅದೇ ರೀತಿ ಮಾಡಲು ನನಗೆ ಸಲಹೆ ನೀಡುತ್ತಿದ್ದರು. ಅವರು ತುಂಬಾ ಒಳ್ಳೆಯ ಪತಿ ಮತ್ತು ತಂದೆ ಮತ್ತು ನಮ್ಮನ್ನು ಸಂತೋಷಪಡಿಸಿದರು. ಅಲ್ಲಾಹನು ದಿವಂಗತರಿಗೆ ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಪದವಿಗಳನ್ನು ಹೆಚ್ಚಿಸಲಿ.

ಎರಡನೆಯ ಉಲ್ಲೇಖವು ತಾಹಿರಾ ನಜೀರ್ ಬೇಗಂ ಸಾಹಿಬಾ ಅವರನ್ನು ತಾಹಿರಾ ರಶೀದುದ್ದೀನ್ ಎಂದು ಕರೆಯಲಾಗುತ್ತದೆ. ಚೌಧರಿ ರಶೀದುದ್ದೀನ್ ಸಾಹಿಬ್ ಮುರಬ್ಬಿ ಸಿಲ್‌ಸಿಲದ ಪತ್ನಿಯಾಗಿದ್ದರು. ಇತ್ತೀಚಿಗೆ ಅವರು ನಿಧನ ಹೊಂದಿದದು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಅಜ್ಜ (ತಂದೆಯ ಅಜ್ಜ) ಹಝ್ರತ್ ಚೌಧರಿ ಗುಲಾಮ್ ಹುಸೈನ್ ಸಾಹಿಬ್(ರ)ರವರ ಮುಖಾಂತರ ಬಂದಿದೆ. ಅಂತೆಯೇ, ಅವರ ಅಜ್ಜ (ತಾಯಿಯ ಅಜ್ಜ) ಹಝ್ರತ್ ಚೌಧರಿ ಗುಲಾಮ್ ಹೈದರ್ ಸಾಹಿಬ್ ಧರಿವಾಲ್(ರ) ಕೂಡ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯಾಗಿದ್ದರು. ನಾನು ಹೇಳಿದಂತೆ, ಚೌಧರಿ ರಶೀದುದ್ದೀನ್ ಸಾಹಿಬ್ ಅವರ ಪತ್ನಿಯಾಗಿದ್ದರು. ಅವರ ವಿವಾಹವನ್ನು ಡಿಸೆಂಬರ್ 58 ರಂದು ಮೌಲಾನಾ ಜಲಾಲುದ್ದೀನ್ ಸಾಹಿಬ್ ಶಮ್ಸ್ ಸಾಹಿಬ್(ರ) ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಸಮ್ಮುಖದಲ್ಲಿ ನೆರವೇರಿಸಿದರು. ಹಝ್ರತ್ ಮುಸ್ಲೆಹ್ ಮೌಊದ್(ರ) ದುಆ ಮಾಡಿಸಿದರು.

ಇವರು ತಮ್ಮ ಒಂದು ಕನಸ್ಸನ್ನು ಸಹ ಉಲ್ಲೇಖಿಸುತ್ತಾರೆ. 1980 ರಲ್ಲಿ ಮಜ್ಲಿಸ್-ಎ-ಮುಶಾವಿರತ್‌ಗೆ ಹೋಗಲು ನನಗೆ ಟಿಕೆಟ್ ಲಭಿಸಿತು. ಪ್ರತಿನಿಧಿಯಾದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಸಹ ಮುಶಾವಿರತ್‌ನಲ್ಲಿ (ಸಮಾಲೋಚನೆಯಲ್ಲಿ) ಭಾಗಿಯಾಗಿದ್ದರು. ಮಜ್ಲಿಸ್ ನಲ್ಲಿ ಯಾರನ್ನು ಸಹಾಬಾಗಳಿಗೆ ಸೇರಿಸಬೇಕು, ಯಾರನ್ನು ಸೇರಿಸಬಾರದು ಎಂಬ ಬಗ್ಗೆ ಸಹಾಬಾಗಳ ಬಗ್ಗೆ ಚರ್ಚೆ ನಡೆಯಿತು. ಅವರು ಹೇಳುತ್ತಾರೆ ನಾನು ಮನೆಗೆ ಬಂದು ಬಹಳ ವಿಷಾದದಿಂದ ಹೇಳಿದೆ ಅಲ್ಲಾಹ್ ಮಿಯಾನ್! ಆ ಕಾಲಾವಧಿಯಲ್ಲಿ ಇರುತ್ತಿದ್ದರೆ ನಾನೂ ಸಹ ಸಹಾಬಿಯಾಗಿರುತ್ತಿದ್ದೆ. ಅವರು ಹೇಳುತ್ತಾರೆ: ಆ ಸಮಯದಲ್ಲಿ ನಾನು ಕನಸು ಕಂಡೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಭೇಟಿ ಮಾಡಿದೆ. ಹುಝೂರ್ ಪುರ್ನೂರ್(ಅ) ನನ್ನ ಮನೆಯಲ್ಲಿ ಅವರ ಬಲಬದಿಯ ಮೇಲೆ ಮಲಗಿದ್ದಾರೆ. ನಾನು ಅವರ ತಲೆಯ ಕಡೆಗೆ ಹೋಗಿ ನಿಂತುಕೊಂಡೆ. ಹಝ್ರತ್ ಮಸೀಹ್ ಮೌಊದ್(ಅ) ಅವರು ನನ್ನನ್ನು ಬಹಳ ಪ್ರೀತಿಯಿಂದ ನೋಡುತ್ತಾ ನೀವು ಹೇಗೆ ಬಂದಿದ್ದೀರಿ? ಎಂದು ಕೇಳಿದರು. ಅದಕ್ಕೆ ನಾನು ಉತ್ತರಿಸಿದೆ: ಹುಝೂರ್ ನಾನು ನಿಮ್ಮನ್ನು ಒತ್ತಬೇಕೆಂದು ಬಯಸುತ್ತೇನೆ. ಅದಕ್ಕೆ ಹುಝೂರ್(ಅ)ರವರು ನನಗೆ ಅವರ ಬಲಗೈ ನೀಡಿದರು ಮತ್ತು ನಾನು ಅದನ್ನು ದೀರ್ಘಕಾಲ ಒತ್ತಿದಿದ್ದೇನೆ. ಅದರ ನಂತರ, ಹುಝೂರ್(ಅ) ಮಗ್ರಿಬ್ ನಮಾಝ್‌ಗಾಗಿ ಅಂಗಳಕ್ಕೆ ಹೋದರು. ನಾನು ಅಂಗಳಕ್ಕೆ ಹೊರಗೆ ಹೋಗುತ್ತೇನೆ ಮತ್ತು ಬಹಳಷ್ಟು ಜನಸಂದಣಿಯಿದೆ ಮತ್ತು ಜನರು ಹುಝೂರ್(ಅ) ಅವರನ್ನು ಭೇಟಿ ಮಾಡಲು ಕಿಟಕಿಗಳ ಮೇಲೆ ಹತ್ತುತ್ತಿದ್ದಾರೆ. ಹುಝೂರ್(ಅ) ರವರು ನನ್ನ ಮನೆಯಲ್ಲಿದ್ದಾರೆ ಎಂದು ನಿಮಗೆ ಹೇಗೆ ಗೊತ್ತಾಯಿತು? ಎಂದು ನಾನು ಅವರನ್ನು ಕೇಳುತ್ತೇನೆ. ಅದಕ್ಕೆ ಅವರು ಹಾಗೆಯೇ. ಅವರು ನಿಮ್ಮ ಮನೆಗೆ ಬಂದಿರಲಿ ನಮಗೆ ತಿಳಿಯುವುದಿಲ್ಲವೇ ಎಂದು ಉತ್ತರಿಸಿದರು. ಅವರು ಚಕ್ 37ನೇಯ ಬೇಜಿ ಆಗಿದ್ದರು ಅವರು ರೊಟ್ಟಿ ಬೇಯಿಸುತ್ತಿದ್ದರು, ಆದ್ದರಿಂದ ನಾನು ಅವರನ್ನು ಕರೆದು ಹೇಳಿದೆ, "ರೊಟ್ಟಿಯನ್ನು ಬೇಯಿಸುವುದನ್ನು ನಿಲ್ಲಿಸಿ, ಹುಝೂರ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಮನೆಗೆ ಬಂದಿದ್ದಾರೆ." ಬಂದು ಅವರನ್ನು ನೋಡಿ ಮತ್ತು ನಂತರ ನಾನು ಹೇಳುತ್ತೇನೆ, ಶೂರಾದಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರನ್ನು ನೋಡುವುದರಿಂದ ಒಬ್ಬರು ಸಹಾಬಿಯ ಗುಂಪಿಗೆ ಸೇರುತ್ತಾರೆ ಎಂದು ಹೇಳುತ್ತಿದ್ದರು. ನನ್ನ ಮನೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎರಡು ಹಗಲು ಒಂದು ರಾತ್ರಿ ತಂಗಿದ್ದರು. ನಾನು ಸಹಾಬಿಯರಲ್ಲಿ ಸೇರಿಕೊಂಡಿದ್ದೇನೆ. ಹಾಗಾಗಿ ಸರ್ವಶಕ್ತನಾದ ಅಲ್ಲಾಹನಿಗೆ ನಾನು ಹೇಗೆ ಧನ್ಯವಾದ ಹೇಳಬೇಕು ಎಂದು ಅವರು ಹೇಳುತ್ತಾರೆ.

ಅವರ ಪುತ್ರ ಡಾ. ಅಲೀಮುದ್ದೀನ್ ಐರ್ಲೆಂಡ್‌ನ ರಾಷ್ಟ್ರೀಯ ಅಧ್ಯಕ್ಷರೂ ಆಗಿದ್ದಾರೆ. ಪ್ರಸ್ತುತ ದಿನಗಳಲ್ಲಿ ಇಲ್ಲಿದ್ದಾರೆ ಅವರು ಹೇಳುತ್ತಾರೆ. ಅಲ್ಲಾಹನು ನಮ್ಮ ತಾಯಿಯನ್ನು ಅಸಂಖ್ಯಾತ ಸದ್ಗುಣಗಳಿಂದ ಅನುಗ್ರಹಿದಿದನು. ಅವುಗಳಲ್ಲಿ ಪ್ರಮುಖವಾದವು ಅಲ್ಲಾಹನೊಂದಿಗಿನ ಸಂಬಂಧವಾಗಿತ್ತು, ಸರ್ವಶಕ್ತನಾದ ಅಲ್ಲಾಹನ ವೈಯಕ್ತಿಕ ಪ್ರೀತಿ ಮತ್ತು ವಾತ್ಸಲ್ಯ ಮತ್ತು ಅಲ್ಲಾಹನ ಕಡೆಯಿಂದ ನೀಡಲ್ಪಟ್ಟ ದುಆ ಸ್ವೀಕಾರದ ಗುಣಲಕ್ಷಣಗಳು ಸಾಕಷ್ಟು ಪ್ರಮುಖವಾಗಿವೆ. ಅವರು ದರ್ಶನಗಳನ್ನು ಪಡೆಯುತ್ತಿದ್ದರು. ಅವರು ಖಿಲಾಫತೆ ಅಹ್ಮದಿಯಾದ ಬಗ್ಗೆ ವೈಯಕ್ತಿಕ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದಿದ್ದರು, ಅದು ಅವರ ಜೀವನದುದ್ದಕ್ಕೂ ಪ್ರಮುಖವಾಗಿ ಉಳಿಯಿತು ಮತ್ತು ಅವರು ಅದನ್ನು ತಮ್ಮ ಮಕ್ಕಳಲ್ಲೂ ಮುಂದುವರಿಸಲು ಪ್ರಯತ್ನಿಸಿದರು. ನಂತರ ಅವರು ಹೇಳುತ್ತಾರೆ ನಮ್ಮ ಬಾಲ್ಯದಲ್ಲಿ ನಮ್ಮ ಮನೆಯಲ್ಲಿ ಹಿರಿಯರನ್ನು ಆಗ್ಗಾಗ ಉಲ್ಲೇಖಿಸಲಾಗುತ್ತಿತ್ತು, ನಮ್ಮ ತಾಯಿ ಹೇಳುತ್ತಿದ್ದ ಹಿರಿಯರ ಹೆಸರುಗಳು ಲೌಕಿಕವಾಗಿ ಅವರು ಯಾವುದೇ ಪ್ರಮುಖ ಸ್ಥಾನವನ್ನು ಹೊಂದಿರಲಿಲ್ಲ, ಬದಲಿಗೆ ಖಲೀಫರುಗಳ ಹೆಸರು ಅಥವಾ ಹಿರಿಯ ಮಹಾನ್ ಮಹಿಳೆಯರ ಹೆಸರುಗಳು ಪ್ರತಿಧ್ವನಿಸುತ್ತಲೇ ಇರುತ್ತಿತ್ತು. ನಮ್ಮ ತಾಯಿ ಈ ಎಲ್ಲಾ ಹಿರಿಯರನ್ನು ದುಆಗಾಗಿ ನಿರಂತರವಾಗಿ ಕೇಳುತ್ತಿದ್ದರು. ಅವರು ಸ್ವತಃ ದುಆ ಮಾಡುವವರಾಗಿದ್ದರಿಂದ ಅನ್ಯರಿಗೆ ದುಆಗಾಗಿ ಹೇಳಬಾರದು ಎಂದಲ್ಲ ಸ್ವತಃ ಅವರು ಜನರ ಬಳಿ ಹೋಗಿ ದುಆಗಾಗಿ ಹೇಳುತ್ತಿದ್ದರು.

ಅದೇ ರೀತಿಯಲ್ಲಿ ಹೇಳುತ್ತಾರೆ, ಇದನ್ನು ಹೊರತುಪಡಿಸಿ, ನಮ್ಮ ತಾಯಿಯ ವ್ಯಕ್ತಿತ್ವದಲ್ಲಿ ಹೆಚ್ಚು ಎದ್ದುಕಾಣುವ ವಿಷಯವೆಂದರೆ ಜಮಾಅತ್ತಿಗೆ ಅವರ ಗೌರವವಾಗಿದೆ. ಒಮ್ಮೆ ನಮ್ಮ ಮನೆಯಲ್ಲಿ ದೂರದ ಆತ್ಮೀಯರೊಬ್ಬರು ಜಮಾಅತ್ ಬಗ್ಗೆ ಅವಾಚ್ಯ ಶಬ್ದಗಳಿಂದ ಬೈಯ್ದರು. ಸಾಮಾನ್ಯವಾಗಿ ಅಂತಹ ಮಾತುಗಳನ್ನು ಕೇಳಿ ಸುಮ್ಮನಾಗುತ್ತಾರೆ. ಆದರೆ ನಮ್ಮ ತಾಯಿ ತಕ್ಷಣ ಉತ್ತರ ನೀಡಿದರು. ಮೊದಲು ಅವರನ್ನು ತಡೆಯಿರಿ. ನಂತರ ಅದನ್ನು ಸರಿಪಡಿಸಿದರು. ಮತ್ತು ಅವರು ಯಾವುದೇ ಪ್ರೀತಿಪಾತ್ರರ ಜೊತೆ

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 07 March 2024, Issue No. 10

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಜಗಳವಾಡುತ್ತಾರೆ ಆದರೆ ಜಮಾಅತ್ತಿನ ಗೌರವಕ್ಕೆ ಧಕ್ಕೆಯಾಗಲು ಬಿಡುವುದಿಲ್ಲ ಎಂದು ಕುಟುಂಬದಲ್ಲಿ ಚೆನ್ನಾಗಿ ತಿಳಿದಿತ್ತು.

ಆಕೆಯ ಪತಿ ಚೌಧರಿ ರಶೀದುದ್ದೀನ್ ಸಾಹಿಬ್ ಒಬ್ಬ ನಿಷ್ಠಾವಂತ, ಮುರಬ್ಬಿಯಾಗಿದ್ದರು (ಮಾರ್ಗದರ್ಶಕ). ತಬ್ಲೀಗ್ ಮಾಡುವ ಉದ್ದೇಶದಿಂದ ಅವರು ಎರಡು ಬಾರಿ ಆಫ್ರಿಕಾಗೆ ಹೋದರು. ಅವರು ಪಾಕಿಸ್ತಾನದಲ್ಲಿ ಉಳಿದು ತಮ್ಮ ಮಕ್ಕಳ ಸಂಪೂರ್ಣ ಶಿಕ್ಷಣದ ಕಡೆಗೆ ಶ್ರಮಿಸಿದರು. ಅವರು ಹೇಳುತ್ತಾರೆ ನನಗೆ ನೆನಪಿದೆ ನಾವು ಯೌವನ ವಯಸ್ಸಿನಲ್ಲಿದ್ದಾಗ, ನಮ್ಮ ಸಹೋದರರ ವೈಯಕ್ತಿಕ ಸ್ನೇಹಿತರು ಯಾರು? ಮತ್ತು ಹುಡುಗರು ಹೇಗಿದ್ದಾರೆ? ಎಂದು ಅವರಿಗೆ ತಿಳಿದಿತ್ತು. ಯಾವಾಗಲು, ಊರಿನ ಸದ್ಗುಣವಂತ ಮತ್ತು ಸುಶಿಕ್ಷಿತ ಹುಡುಗನೊಂದಿಗೆ ಸ್ನೇಹ ಬೆಳೆಸಬೇಕು ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಮತ್ತೆ ಅವರು ಹೇಳುತ್ತಾರೆ, ನಾನು ಗಮನಿಸಿದ ಒಂದು ವಿಷಯವೆಂದರೆ ಅವರು ಆಗಾಗ್ಗೆ ಅಲ್ಲಾಹನನ್ನು ಪ್ರೀತಿಸುವ ಮಹಿಳೆಯರೊಂದಿಗೆ ಸ್ನೇಹಿತರಾಗಿದ್ದೀರಿ ಮತ್ತು ಸ್ವತಃ ಹೇಳುತ್ತಿದ್ದರು: ನಾನು ಲೌಕಿಕ ಮಹಿಳೆಯರ ಸಹವಾಸದಲ್ಲಿ ಆನಂದಿಸುವುದಿಲ್ಲ, ಬದಲಿಗೆ ಸರಳಜೀವಿ ಮತ್ತು ಧರ್ಮದಲ್ಲಿ ಆಸಕ್ತಿಯನ್ನು ಹೊಂದಿರುವಂತಹ ಜನರ ಸಹವಾಸದಲ್ಲಿ ಆನಂದಿಸುತ್ತೇನೆ.

ಅವರ ಪುತ್ರಿ ಝುಬಾದಾ ಸಾಹಿಬಾ ಹೇಳುತ್ತಾರೆ, ಬದಲಿಗೆ ಮೂವರು ಹೆಣ್ಣುಮಕ್ಕಳಾದ ಅಬಿದಾ, ತಯ್ಯಿಬಾ ಮತ್ತು ಜುಬಾದಾ ಕೂಡ ಹೇಳುತ್ತಾರೆ, ನಮಗೆ ಪ್ರಜ್ಞೆ ಬಂದಾಗಿನಿಂದ, ನಾವು ನಮ್ಮ ತಾಯಿಯನ್ನು ತುಂಬಾ ಆರಾಧಿಸುವ, ಪ್ರಾರ್ಥಿಸುವ, ಸ್ನೇಹಪರ ಮತ್ತು ಉತ್ತಮ ನಡವಳಿಕೆಯನ್ನು ಕಂಡುಕೊಂಡೆವು. ಬಹಳ ವಿನಯದಿಂದ ಆರಾಧನೆ ಮಾಡುತ್ತಿದ್ದಳು. ಸಮಸ್ಯೆ ಎದುರಾದಾಗ ಬಹಳ ಹೊತ್ತು ತನ್ನ ಕೋಣೆಯಲ್ಲಿ ಬೀಗ ಹಾಕಿಕೊಂಡು ಸಜದ ಮಾಡುತ್ತಿದ್ದಳು. ಅವರ ಸಮರ್ಪಿತ ಜೀವನದಲ್ಲಿ ಬಡತನದ ಸಂದರ್ಭಗಳು ಬಂದರೂ ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ತಾಳ್ಮೆ, ಧೈರ್ಯ ಮತ್ತು ಪರಿಶ್ರಮದಿಂದ ಅವುಗಳನ್ನು ಸಹಿಸಿಕೊಂಡಿದ್ದಳು. ಅವರು ಹಜ್ಗೆ ಹೋಗಲು ಸಹ ಅನುಗ್ರಹ ಪಡೆದರು. ಸರ್ವಶಖ್ತನಾದ ಅಲ್ಲಾಹನು ಅವರ ಆಸೆಯನ್ನು ಪೂರೈಸಿದನು. ಅವರು ಹನ್ನೊಂದು ಎತಿಕಾಫ್‌ಗಳನ್ನು ಅನುಷ್ಠಿಸಿದರು. ಅವರ ಈ ಪುತ್ರಿಯರು ಹೇಳುತ್ತಾರೆ: ಭೇಟಿ ನೀಡಿದ ಜನರು, ವಿಶೇಷವಾಗಿ ಮಹಿಳೆಯರು, ಅವರ ದಯೆ, ಉತ್ತಮ ನಡತೆ ಮತ್ತು ಸ್ನೇಹಪರತೆಯನ್ನು ಉಲ್ಲೇಖಿಸಿದ್ದಾರೆ. ಅವರು ಧಾರ್ಮಿಕ ಪುಸ್ತಕಗಳನ್ನು ವಿಶೇಷವಾಗಿ ಅಧ್ಯಾಯನ ಮಾಡುತ್ತಿದ್ದರು ಮತ್ತು ವಿಶೇಷವಾಗಿ ಜೀವನಚರಿತ್ರೆಯ ಪುಸ್ತಕಗಳನ್ನು ಹೆಚ್ಚಿನ ಆಸಕ್ತಿಯಿಂದ ಓದುತ್ತಿದ್ದರು. ಜುಮುಅ ದಿನದಂದು ಆರಾಧನೆಗೆ ವಿಶೇಷ ವ್ಯವಸ್ಥೆ ಮಾಡುತ್ತಿದ್ದರು. ಹಲವು ಗಂಟೆಗಳ ಮುಂಚೆಯೇ ಮಸೀದಿಗೆ ಹೋಗಿ ನವಾಫಲ್ ನಿರ್ವಹಿಸುತ್ತಿದ್ದರು.

ಅವರ ಪುತ್ರರಲ್ಲಿ ಒಬ್ಬರಾದ ಸಲೀಮುದ್ದೀನ್ ಸಾಹಿಬ್ ಅವರು ಮುರಬ್ಬಿಯಾಗಿದ್ದಾರೆ ಮತ್ತು ಪ್ರಸ್ತುತ ದಿನಗಳಲ್ಲಿ ಅವರು ರಬ್ವಾದಲ್ಲಿ ಸಾರ್ವಜನಿಕ ವ್ಯವಹಾರಗಳ ಮೇಲ್ವಿಚಾರಕರಾಗಿದ್ದಾರೆ. ತಾಯಿಯು ವಾಖಿಫೆ ಝಿಂದಗಿಯವರ ಪತ್ನಿ ಮತ್ತು ನಾನು ಹೇಳಿದಂತೆ ನಿಕಾಹ್‌ವನ್ನು ಜಲಾಲುದ್ದೀನ್ ಸಾಹಿಬ್ ಶಾಮ್ಸ್ ಪಠಿಸಿದರು ಮತ್ತು ಹಝ್ರತ್ ಮುಸ್ಲೆಹ್ ಮೌಊದ್(ರ) ದುಆ ಮಾಡಿಸಿದರು. ಅದಕ್ಕೆ ಸಂಬಂಧಿಸಿದಂತೆ ಒಂದು ಘಟನೆ ತಂದೆಯವರು ತಿಳಿಸಿದರು ಅದೇನೆಂದರೆ ಅವರ ತಂದೆ ಅಂದರೆ ತಾಹಿರ ಸಾಹಿಬ ಅವರ ಪತಿಯ ನಿಕಾಹ್ ಬೇರೆ ಕಡೆ ಆಗುತ್ತಿತ್ತು ಅದಕ್ಕೆ ಸಂಪೂರ್ಣ ಸಿದ್ಧತೆಗಳು ನಡೆದಿದ್ದವು. ಮೌಲಾನಾ ಅಬುಲ್ ಅತಾ ಸಾಹಿಬ್ ಜಲಂಧ್ರಿ ಅವರು ಈ ನಿಕಾಹ್ ಅನ್ನು ಮಸ್ಜಿದ್ ನುಸ್ರತ್ ರಬ್ವಾದಲ್ಲಿ ಪಠಿಸಬೇಕಾಗಿತ್ತು. ಎಲ್ಲರೂ ಬಂದಿದ್ದರು. ಹಝ್ರತ್ ಮೌಲಾನಾ ಅಬುಲ್ ಅತಾ ಜಲಂಧ್ರಿ ಸಾಹಿಬ್ ಅವರು ಎಲ್ಲರ ನಿಕಾಹ್‌ಗಳನ್ನು ಪಠಿಸಿದರು ಆದರೆ ಅವರ ನಿಕಾಹ್‌ವನ್ನು ಪಠಿಸಲಿಲ್ಲ ಬದಲಿಗೆ ನೀವು ವಾಖಿಫೆ ಝಿಂದಗಿ ಆಗಿದ್ದೀರಿ ಆದ್ದರಿಂದ ನಿಮ್ಮ ನಿಕಾಹ್ ಹಝ್ರತ್ ಮುಸ್ಲಿಹ್ ಮೌಊದ್(ರ) ಪಠಿಸುತ್ತಾರೆ ಎಂದು ಹೇಳಿದರು. ಆದಾಗ್ಯೂ, ಕೆಲವು ದಿನಗಳ ನಂತರ ನಿಕಾಹ್ ಆಗಬೇಕಾದ ಕಡೆಯಿಂದ ಹುಡುಗಿಯ ಕಡೆಯಿಂದ ನಿರಾಕರಣೆಯಾಯಿತು ಮತ್ತು ನಂತರ ಅವರು ತಾಹಿರಾ ಸಾಹಿಬಾ ಅವರನ್ನು ವಿವಾಹವಾದರು ಮತ್ತು ಈ ಮದುವೆಯು ಬಹಳ ಅನುಗ್ರಹದಾಯಕವಾಯಿತು.

ಚಂದಗಳನ್ನು ನೀಡುವುದರಲ್ಲಿ ಕಡ್ಡಾಯವಾಗಿದ್ದರು. ಕೆನೆಡದ ಸೆಕ್ರೇಟರಿ ಮಾಲ್ ಹೇಳುತ್ತಾರೆ: ನಾನು ಕನಸ್ಸಿನಲ್ಲಿ ರೆಜಿಸ್ಟರ್ ತೆರೆದು ಚಂದದ ಲೆಕ್ಕ ಪರಿಶೀಲಿಸುತ್ತಿರುವುದನ್ನು ಕಂಡೆ. ಅಷ್ಟರಲ್ಲಿ ತಾಹಿರಾ ರಶೀದುದ್ದೀನ್ ಸಾಹಿಬಾ ಅವರ ಪಕ್ಕದಲ್ಲಿ ಬಂದು ಕುಳಿತರು. ಈ ಸಮಯದಲ್ಲಿ ನೀವು ಚಂದಾ ತೆಹ್ರೀಕ್ ಜದೀದ್‌ನಲ್ಲಿ ಐದು ಸಾವಿರ ಡಾಲರ್‌ಗಳನ್ನು ಪಾವತಿಸಿದರೆ, ಐದು ಸಾವಿರ ರಿಜಿಸ್ಟರ್‌ನಲ್ಲಿ ನಿಮ್ಮ ಹೆಸರು ಸೇರುತ್ತದೆ ಎಂದು ನಾನು ಹೇಳುತ್ತೇನೆ ಅದಕ್ಕೆ ಅವರು ನನಗೆ ಕನಸಿನಲ್ಲಿ ತನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಆ ಸಮಯದಲ್ಲಿ ಅವರು ಪಾಕಿಸ್ತಾನಕ್ಕೆ ಹೋಗಿದ್ದರು. ಅವರು ಪಾಕಿಸ್ತಾನದಿಂದ ಹಿಂತಿರುಗಿದಾಗ, ಅವರು ಅವರಿಗೆ ಆ ಕನಸನ್ನು ಹೇಳಿದರು. ನಾನು ಭರವಸೆ ಇತ್ತು ಮತ್ತು ಈಗ ಅವರು ಅದೇ ರೀತಿ ಮಾಡುತ್ತಾರೆ ಎಂದು ಅಲ್ಲಾಹನು ಅವರಿಗೆ ಅನುಗ್ರಹಿಸಿದ್ದಾನೆ ಎಂದು ಹೇಳಿದರು. ಕನಸನ್ನು ಹೇಳಿದಾಗ, ಅವರು ತಕ್ಷಣವೇ ಐದು ಸಾವಿರ ಡಾಲರ್ಗಳನ್ನು ಪಾವತಿಸಿದರು.

ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

...*...*...*...

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.